# ಗಾಯತ್ರೀ ಚೈತನ್ಯ

## ವಿಶ್ವದ ಅನಂತ ಅಚ್ಯುತ ಶಕ್ತಿ

ದ್ವಿತೀಯ ಪರಿಷ್ಕೃತ ಮುದ್ರಣ

ಸಂಗ್ರಹ ಕರ್ತೃ

ಸೌ. ಅನಿತಾ ಅರವಿಂದ ಸರಾಫ

# ಗಾಯತ್ರಿ ಚೈತನ್ಯ

ವಿಶ್ವದ ಅನಂತ ಅಚ್ಯುತ ಶಕ್ತಿ

**ಭಾಗ – 1**

ದ್ವಿತೀಯ ಪರಿಷ್ಕೃತ ಆವೃತ್ತಿ

**ಸಂಗ್ರಹ ಕರ್ತೃ**

**ಸೌ. ಅನಿತಾ ಅರವಿಂದ ಸರಾಫ**

**ಪುಸ್ತಕದ ಶೀರ್ಷಿಕೆ – ಗಾಯತ್ರೀ ಚೈತನ್ಯ, ವಿಶ್ವದ ಅನಂತ ಅಚ್ಯುತ ಶಕ್ತಿ**

**ಮೊದಲ ಆವೃತ್ತಿ – ಜೂನ 2023**

Shashawat Publication, Self Publishing Company, Bilaspur, Chhatisgarh.

**ದ್ವಿತೀಯ ಪರಿಷ್ಕೃತ ಆವೃತ್ತಿ – ಜನವರಿ 2025**

**© ಸೌ. ಅನಿತಾ ಅರವಿಂದ ಸರಾಫ**

E-mail: anitaveda59@gmail.com

No part of this book may be reproduced or transmitted in any form by any means, electronic or mechanical, including photocopy, recording or any information storage and retrieval system, without permission in writing from the copyright owners.

**Disclaimer**

The author is solely responsible for the contents published in this book. The publishers don't take any responsibility for the same in any manner. Errors, if any, are purely unintentional and readers are requested to communicate such errors to the editors or publishers to avoid discrepancies in future.

**E-ISBN: 978-93-6252-185-9**

**MRP Rs. 800/-**

**ಮುಖಪುಟ ವಿನ್ಯಾಸ ಹಾಗೂ ಅಕ್ಷರ ಜೋಡನೆ: ಸೌ. ಅನಿತಾ ಅರವಿಂದ ಸರಾಫ**

**ಚಿತ್ರಗಳ ಸೌಜನ್ಯ: ಸಾಧಕ ಗುರು-ಬಂಧುಗಳು ಹಾಗೂ ಅಂತರ್ಜಾಲ.**

**ಒಟ್ಟು ಪುಟಗಳ ಸಂಖ್ಯೆ: xxviii + 522 = 550**

**Paper used:** 75 GSM, 8 inches × 11 inches

**Publisher, Printer & Distributor:**
Selfypage Developers Pvt Ltd,
Pushpagiri Complex,
Beside SBI Housing Board,
K.M. Road Chikkamagaluru, Karnataka.
Tel.: +91-8861518868
E-mail: info@iipbooks.com

**IMPRINT: I I P Iterative International Publishers**

**For Sales Enquiries:**
Contact: +91- 8861511583
E-mail: sales@iipbooks.com



# ಗಾಯತ್ರೀ ಚೈತನ್ಯ

## ವಿಶ್ವದ ಅನಂತ ಅಚ್ಯುತ ಶಕ್ತಿ

**ಸಂಗ್ರಹ ಕರ್ತೃ: ಸೌ. ಅನಿತಾ ಅರವಿಂದ ಸರಾಫ**

# ಲೇಖಕಿಯ ಪರಿಚಯ

ಸೌ. ಅನಿತಾ ಅರವಿಂದ ಸರಾಫ ಅವರಲ್ಲಿ ಬಾಲ್ಯದಿಂದ ಬೆಳೆದು ಬಂದ **ದತ್ತಭಕ್ತಿ**ಯು ಅವರ ತಂದೆ ಹಾಗೂ ತಾಯಿಯವರಿಂದ ಬಂದಂತಹ ಬಳುವಳಿ ಆಗಿರುವುದು. ಇದು ಸಮಯಾನುಸಾರ ವಿರಾಟ್ ಸ್ವರೂಪದಲ್ಲಿ ವರ್ಧಿಸಿ **ಸದ್ಗುರು**ಗಳನ್ನು ದೊರಕಿಸಿಕೊಟ್ಟಿತು.

ಇವರ ಸದ್ಗುರುಗಳು ಗಾಯತ್ರೀ ತಪೋಭೂಮಿಯ ಸ್ಥಾಪನಾಚಾರ್ಯರಾದ **ಪರಮಪೂಜನೀಯ ಶ್ರೀ ಶ್ರೀ ವಲ್ಲಭ ಚೈತನ್ಯ ಮಹಾರಾಜರು.**

ತಮ್ಮ ಸದ್ಗುರುಗಳು **ಗಾಯತ್ರೀ ಸಾಧನೆ**ಯನ್ನೇ ಮಾಡಲು ಕಾರಣವೇನು ಎಂಬುದರ ಜಿಜ್ಞಾಸೆಗೆ ಉತ್ತರವನ್ನು ಅರಸುತ್ತಿರುವಾಗ, ಸ್ವತಃ ಅವರಿಂದಲೇ **ಗಾಯತ್ರೀ ಮಂತ್ರದ ವಿಷಯದಲ್ಲಿ ಸಂಶೋಧನೆ** ಮಾಡಲು ಮತ್ತು ಈ ಬಗ್ಗೆ ಪುಸ್ತಕ ಬರೆಯಲು ಆದೇಶದೊಂದಿಗೆ ಅನುಗ್ರಹವಾಯಿತು. ಗುರುವಾಕ್ಯದಂತೆ ಲೇಖಕಿಯಿಂದ ಈ ವಿಷಯದ ಕುರಿತು ದೀರ್ಘವಾದ ಅಧ್ಯಯನ ಪ್ರಾರಂಭವಾಯಿತು. ಕಾಲಕಾಲಕ್ಕೆ ಅವರ ಸದ್ಗುರುಗಳೇ ಜ್ಞಾನವನ್ನು ನೀಡುತ್ತಾ ಮಾರ್ಗದರ್ಶನ ಮಾಡಿದ್ದರ ಫಲವೇ ಈಗ ತಮ್ಮ ಹಸ್ತದಲ್ಲಿರುವ **ಗಾಯತ್ರೀ ಚೈತನ್ಯ** ಪುಸ್ತಕ!

ಈ ಪುಸ್ತಕದ ಮೊದಲು ಭಗವತೀ ಗಾಯತ್ರೀಯ ಅಯಾಚಿತ ಕೃಪೆಯಿಂದ **ಸದ್ಗುರು ದರ್ಶನ** ಎಂಬ ತಮ್ಮ **ಸದ್ಗುರುಗಳ ಜೀವನ ಚರಿತ್ರೆ/ಗುರುಚರಿತ್ರೆ**ಯನ್ನು ಬರೆದಿರುವರು.

ಇವರಿಂದ **ಚೀನೀ ವಾಸ್ತುಶಾಸ್ತ್ರ** ಕುರಿತಂತೆ ಈಗಾಗಲೇ ಎರಡು ಪುಸ್ತಕಗಳೂ ಪ್ರಕಟಗೊಂಡಿರುವವು. **ತರಂಗ ವಾರಪತ್ರಿಕೆ**ಯಲ್ಲಿ ಚೀನೀವಾಸ್ತು ಮತ್ತು ಚೀನೀ ಶಕುನಶಾಸ್ತ್ರ ಕುರಿತು ಮುಖಪುಟ ಲೇಖನಗಳು, **ವಿಜಯ ಕರ್ನಾಟಕ** ಹಾಗೂ ಮುಂಬೈಯ ಕೆಲವು ವೃತ್ತಪತ್ರಿಕೆಗಳಲ್ಲಿ ಚೀನೀವಾಸ್ತು ವಿಷಯದ ಲೇಖನಗಳು ಪ್ರಕಟಗೊಂಡಿರುವವು. **ದತ್ತ ಜಯಂತಿ**ಯ ಪ್ರಯುಕ್ತ ಮುಂಬೈಯ **ಕರ್ನಾಟಕ ಮಲ್ಲ** ಎಂಬ ದೈನಂದಿನ ವಾರ್ತಾ ಪತ್ರಿಕೆಯಲ್ಲಿ ಎರಡು ಲೇಖನಗಳು ಮುದ್ರಣಗೊಂಡಿರುವವು.

ಲೇಖಕಿಯು ಮೂಲತಃ ಹುಬ್ಬಳ್ಳಿಯವರಾಗಿದ್ದು, ಶಾಲಾ ಶಿಕ್ಷಣವನ್ನು Girls English School ಹಾಗೂ ಪದವಿ ಶಿಕ್ಷಣವನ್ನು P. C. Jabin Science Collegeನಲ್ಲಿ ಪೂರೈಸಿರುವರು.

ತಮ್ಮ ಆಧ್ಯಾತ್ಮಿಕ ಅಧ್ಯಯನಕ್ಕೆ ಪೂರಕವಾಗಲು **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**ದಿಂದ ಮಾನ್ಯತೆ ಪಡೆದ SAKSHI TRUST (Sri Aurobindo Kapali Shastry Institute of Vedic Culture) ಅವರ Certificate Course on Applied Veda Knowledge ಕಲಿತಿರುವರು.

ವೇದ, ಉಪನಿಷತ್ತು ಹಾಗೂ ಗಾಯತ್ರೀ ವಿಷಯದಲ್ಲಿ ಅಪಾರ ಆಸಕ್ತಿಯನ್ನು ಹೊಂದಿರುವ ಇವರು, ಮನೆಯಲ್ಲಿ ತಮ್ಮದೇಯಾದ ಒಂದು ಪುಟ್ಟ **ಗ್ರಂಥಾಲಯ**ವನ್ನೇ ನಿರ್ಮಿಸಿಕೊಂಡಿರುವರು!

ಈಗ ತಮ್ಮ ಪರಿವಾರದೊಂದಿಗೆ ನವಿ ಮುಂಬೈಯಲ್ಲಿ ನೆಲೆಸಿರುವರು.

# ಸಂಗ್ರಹ ಕರ್ತೃಗಳ ಹೃತ್ಪೂರ್ವಕ ಪ್ರಾರ್ಥನೆ

ಶಾಂತಿಪಾಠ

**ಓಂ ವಾಙ್ ಮೇ ಮನಸಿ ಪ್ರತಿಷ್ಠಿತಾ ಮನೋ ಮೇ ವಾಚಿ ಪ್ರತಿಷ್ಠಿತ ಮಾವಿರಾವೀರ್ಮ ಏಧಿ ।**
**ವೇದಸ್ಯ ಮ ಆಣೀ ಸ್ಥಃ ಶ್ರುತಂ ಮೇ ಮಾ ಪ್ರಹಾಸೀರನೇನಾಧೀತೇನಾಹೋರಾತ್ರಾನ್ ಸಂದಧಾಮಿ ।**
**ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ । ತನ್ಮಾಮವತು ತದ್ವಕ್ತಾರಮವತು ।**
**ಅವತು ಮಾಮವತು ವಕ್ತಾರಮ್ ಅವತು ವಕ್ತಾರಮ್ ।**
**ಓಂ ಶಾಂತಿಃ ಶಾಂತಿಃ ಶಾಂತಿಃ ॥**
– ಐತರೇಯ ಉಪನಿಷತ್ತು, 4ನೆಯ ಅಧ್ಯಾಯ, 1ನೆಯ ಖಂಡ, ಸರಸ್ವತೀ ರಹಸ್ಯ ಉಪನಿಷತ್ತು.

ನನ್ನ ಮಾತುಗಳು ಇತರ **ಇಂದ್ರಿಯಗಳೊಡನೆ** ನನ್ನ ಮನಸ್ಸಿನಲ್ಲಿ ನೆಮ್ಮದಿಯ ನೆಲೆಯನ್ನು ಹೊಂದಲಿ. ನನ್ನ ಮನಸ್ಸೂ ಇತರ ಇಂದ್ರಿಯಗಳೊಡನೆ ನನ್ನ ಮಾತಿನಲ್ಲಿ ಪ್ರತಿಷ್ಠಿತಗೊಳ್ಳಲಿ.
(ಅರ್ಥಾತ್, ನನ್ನ ವಾಗೀಂದ್ರಿಯಗಳು ಹಾಗೂ ಮನಸ್ಸು ಒಂದಕ್ಕೊಂದು ಅನುಕೂಲಕರವಾಗಿರಲಿ)

ಓ ಪ್ರಕಾಶಮಾನ **ಪರಮಾತ್ಮನ** ತೇಜಸ್ಸೇ, ನನ್ನ ಮನಸ್ಸನ್ನು ಚೇತನದಿಂದ ಬೆಳಗು. ಓ ನನ್ನ ಮನೋವಾಕ್ಕುಗಳೇ, ನೀವು ವೇದವಾಕ್ಯಗಳಲ್ಲಿ ನಿರೂಪಿಸಿರುವ ಸೂಕ್ಷ್ಮ ವಾದ ವಸ್ತುವನ್ನು ಅರಿಯುವಂತೆ ಬಲನೀಡಿರಿ.

ಗುರು ಸನ್ನಿಧಿಯಲ್ಲಿ ನಾನು ಜ್ಞಾನವನ್ನು ಪಡೆಯುತ್ತಿರುವಾಗ ಓ ಮನಸ್ಸೇ! ಅಲೆದಾಡಬೇಡಾ. ಕೇಳಿರುವ ವಾಕ್ಯಾರ್ಥವು ಮರೆಯದಿರಲಿ.

ಓ ಬ್ರಹ್ಮವೇ, ಈ ರೀತಿಯಲ್ಲಿ ನಾನು ಮನಸ್ಸು ಹಾಗೂ ಮಾತುಗಳಿಂದ ಪಡೆದುಕೊಂಡಂತಹ ಜ್ಞಾನದೊಂದಿಗೆ ಅನುಸಂಧಾನ ಮಾಡುತ್ತಾ ನಿನ್ನನ್ನು ಅಹರ್ನಿಶಿ ಧ್ಯಾನಿಸುತ್ತೇನೆ. ವೇದವಾಕ್ಯಗಳಿಗನುಸಾರವಾಗಿ ಮಾತನಾಡುತ್ತೇನೆ.

ಸತ್ಯವನ್ನೇ ಹೇಳುತ್ತಿರುತ್ತೇನೆ. ಬ್ರಹ್ಮ ವೃತ್ತಾಂತವನ್ನು ತಿಳಿಸುವ ವಕ್ತಾರನನ್ನು/ಗುರುವನ್ನು ಬ್ರಹ್ಮವು ರಕ್ಷಿಸಲಿ. ಅದು ಬ್ರಹ್ಮ ವೃತ್ತಾಂತವನ್ನು ಕೇಳುವ ನನ್ನನ್ನು/ಶಿಷ್ಯೆಯನ್ನು ರಕ್ಷಿಸಲಿ. ಅದು ವಕ್ತಾರನನ್ನು ಕಾಪಾಡಲಿ.

ಮೂರೂ ಲೋಕಗಳಲ್ಲಿ ಶಾಂತಿಯು ನೆಲೆಸಲಿ/ತ್ರಿವಿಧ ತಾಪಗಳು ಶಾಂತವಾಗಲಿ/ಚಿರಂತನ ಶಾಂತಿ ಸಮನಿಸಲಿ.



# ಮನೋಗತ

ಗಾಯತ್ರೀ ಮಂತ್ರದ ಜ್ಞಾನವು ಸಮಸ್ತ ಬ್ರಹ್ಮಾಂಡವಾದರೆ, ಈ ಕೃತಿಯು ಆ ಬೃಹತ್ತತೆಯಲ್ಲಿಯ ಒಂದು ಅತ್ಯಂತ ಕಿರಿದಾದ ಧೂಳಿನ ಕಣ. ಜ್ಞಾನವೆಂಬುದು ಅನಂತ … ಅನಂತತೆಯನ್ನು ಅಕ್ಷರಗಳಲ್ಲಿ ಬಂಧಿಸಲಾಗದು, ಅಷ್ಟೇ ಅಲ್ಲಾ ಅದು ಅಸಾಧ್ಯ ಕೂಡಾ!

ಗಾಯತ್ರೀ ಮಂತ್ರದ ವಿಷಯದಲ್ಲಿ ಪುಸ್ತಕ ಬರೆಯುವುದೆಂದರೆ ಸಂಪೂರ್ಣ ಸಾಗರದ ಜಲವನ್ನು ಆಪೋಶನ ತೆಗೆದುಕೊಳ್ಳುವ ಸಾಹಸಕ್ಕೆ ಕೈ ಹಾಕಿದಂತೆ. ಗಾಯತ್ರೀಯೆಂಬ ಅನಂತ ಜ್ಞಾನಸಾಗರದ ಪೂರ್ಣ ಪರಿಚಯವನ್ನು ಮಾಡಿಸುವುದು ಮನುಷ್ಯರ ಅಲ್ಪ ಬುದ್ಧಿಗೆ ಸುಲಭವಲ್ಲದ್ದು. ಅದರಲ್ಲೂ ಕಲಿಯುಗದಲ್ಲಿ ಜನಿಸಿದ ನನ್ನಂತಹ ಸಾಧಾರಣ ಮನುಜಳಿಗೆ ಮತ್ತಷ್ಟು ಕಠಿಣವಾದರೂ, ಅಲೆಗಳ ವಿರುದ್ಧ ಈಜಲು ಪ್ರಯತ್ನಿಸಿರುವೆ.

ಈ ಕಾರ್ಯಕ್ಕೆ ನನ್ನ ಸದ್ಗುರುಗಳಾದ **ಪರಮಪೂಜನೀಯ ಶ್ರೀ ಶ್ರೀ ವಲ್ಲಭ ಚೈತನ್ಯ ಮಹಾರಾಜರ** ಕೃಪಾಕಟಾಕ್ಷವೇ ಶ್ರೀರಕ್ಷೆ. ಗುರುದೇವರ ಆಶೀರ್ವಾದ ಹಾಗೂ ಅನುಮತಿಯೊಂದಿಗೆ ವೈದಿಕ, ಔಪನಿಷಧಿಕ, ಸ್ಮೃತ್ಯೋಕ್ತ, ಪೌರಾಣಿಕ, ಅಂತರ್ಜಾಲಿಕ ಹಾಗೂ ವೈಯಕ್ತಿಕ ಅನುಭವಗಳಿಂದ ಸಂಗ್ರಹಿಸಿದ ವಿಷಯಗಳು ಈ ಪುಸ್ತಕದಲ್ಲಿ ಸಂಕಲನಗೊಂಡಿವೆಯಾದರೂ, ಇದು **ದಿಗ್ದರ್ಶನ ಮಾತ್ರ** ಎಂಬುದೇ ನನ್ನ ಅಭಿಪ್ರಾಯ.

ನಮ್ಮ ಪೂರ್ವಜರು ಗಾಯತ್ರೀ ಮಂತ್ರದ ಉಪಾಸಕರಾಗಿ ಸಾಧನೆಯನ್ನು ಮಾಡಿ, ತಮ್ಮ ಆತ್ಮಿಕಶಕ್ತಿಯನ್ನು ಜಾಗೃತಗೊಳಿಸಿಕೊಂಡಿರುವರು. ಆ ಗಾಯತ್ರೀ ಶಕ್ತಿಯೇ ನಮ್ಮ ಸಾಧನೆಗೆ ರಕ್ಷಾಕವಚವಾಗಿರುವುದು.

ನಾವೆಲ್ಲರೂ ಕೂಡಾ ಗಾಯತ್ರೀ ಮಂತ್ರದ ಜಪೋಪಾಸನೆ ಮಾಡಿದಾಗಲೇ ಋಷಿ ಋಣದಿಂದ ಮುಕ್ತರಾಗಿ, ನಮ್ಮ ಮುಂದಿನ ಪೀಳಿಗೆಗೆ ಮಾರ್ಗದರ್ಶಕರಾಗಬಹುದು.

ಗಾಯತ್ರೀ ಮಂತ್ರದ ಸಾಧನೆಯನ್ನು ಅಖಂಡ ವಿಶ್ವಾಸ, ದಿಟವಾದ ದೈವಿಕ ಪ್ರೇಮ ಮತ್ತು ವಿಧಿಗನುಸಾರ ಅವಿರತವಾಗಿ ಮಾಡಿದಲ್ಲಿ ಫಲ ನಿಶ್ಚಿತ.

ಎಷ್ಟು ಜೀವಗಳೋ, ಅಷ್ಟು ಪ್ರಕೃತಿಗಳು ಮತ್ತು ಅಷ್ಟೇ ಸಾಧನಾ ಮಾರ್ಗಗಳು!

ಪ್ರತಿಯೊಂದು ಸಿದ್ಧಾಂತವೂ ಆಯಾ ಸಾಧಕರ ಕರ್ಮ, ಸ್ವಭಾವ ಹಾಗೂ ಅಗತ್ಯಗಳಿಗೆ ಅನುಗುಣವಾಗಿರುವಂತಹ ಸತ್ಯದ ಒಂದು ಮುಖದ ವಿವರಣೆ ನೀಡುತ್ತದೆ. ಸತ್ಯದ ಪ್ರಾಕಟ್ಯವು ಬಹುಮುಖಿ, ಆದುದರಿಂದ ಇದರ ವಿವಿಧ ಮುಖಗಳನ್ನು ಸಾಕ್ಷಾತ್ಕರಿಸಿಕೊಳ್ಳುವ ಮಾರ್ಗಗಳೂ ಅಸಂಖ್ಯ.

ಸಾಧನೆಗೆ ಅನೇಕ ಮಾರ್ಗಗಳಿವೆ, ಉದಾಹರಣೆ – ಭಕ್ತಿಮಾರ್ಗ, ಜ್ಞಾನಮಾರ್ಗ …

ಯೋಗಗಳಿವೆ, ಉದಾಹರಣೆ – ಧ್ಯಾನಯೋಗ, ಕ್ರಿಯಾಯೋಗ …

ಶಾಸ್ತ್ರಗಳಿವೆ, ಉದಾಹರಣೆ – ತಂತ್ರಶಾಸ್ತ್ರ, ಜ್ಯೋತಿಷ್ಯಶಾಸ್ತ್ರ …

ಪ್ರತಿಯೊಂದು ಮಾರ್ಗ, ಯೋಗ ಹಾಗೂ ಶಾಸ್ತ್ರಗಳಲ್ಲಿಯೂ ಅನೇಕಾನೇಕ ಮಂತ್ರ ಅಥವಾ ಶ್ಲೋಕಗಳಿವೆ. ಇವೆಲ್ಲವುಗಳ ಕಾರ್ಯ ಮತ್ತು ಫಲಗಳನ್ನು ಕೇವಲ ಒಂದು ಮಂತ್ರದಿಂದಲೇ ಸಾಧಿಸಿಕೊಳ್ಳಬಹುದು, ಅದೇ ಅದ್ಭುತ ಗಾಯತ್ರೀ!

**ಏಕ ಏವ ತು ಸಂಸಿದ್ಧಃ ಗಾಯತ್ರೀ ಮಂತ್ರ ಆದಿಶತ್ ।**

**ಸಮಸ್ತಲೋಕ ಮಂತ್ರಾಣಾಂ ಕಾರ್ಯಸಿದ್ಧೇಸ್ತು ಪೂರಕಃ ॥**

– ಗಾಯತ್ರೀ ಸಂಹಿತಾ, 56ನೆಯ ಶ್ಲೋಕ.

ಸಿದ್ಧವಾದ ಒಂದೇ ಗಾಯತ್ರೀ ಮಂತ್ರವು ಜಗತ್ತಿನ ಸಮಸ್ತ ಮಂತ್ರಗಳ ಮೂಲಕ ಸಾಧ್ಯವಾಗುವ ಎಲ್ಲಾ ಕೆಲಸಗಳನ್ನು ಸಿದ್ಧಮಾಡಿ ತೋರಿಸಬಲ್ಲದು.

ಇದಕ್ಕೆ ಮುಖ್ಯ ಕಾರಣ ಗಾಯತ್ರೀಯು ಸರ್ವಹಿತ, ಸರ್ವವೇದ್ಯ, ಸರ್ವಸುಲಭ, ಸರ್ವವ್ಯಾಪಕ, ಸರ್ವಮಂಗಳ ಹಾಗೂ ಸರ್ವಾಂತರ್ಯಾಮಿ ಮಂತ್ರವಾಗಿರುವುದು.

**ಜಿಜ್ಞಾಸುವೇ ಜ್ಞಾನದ ಅಧಿಕಾರಿ ...**

ಜ್ಞಾನದಾಹವಿರುವ ಜಿಜ್ಞಾಸುಗಳಿಗೆ ಈ ವೇದಮಧು ಉಪಯುಕ್ತವಾಗುವುದೆಂಬ ವಿಶ್ವಾಸವಿರುವುದರಿಂದ, ಅವರ ಮುಂದೆ ಈ ಪುಸ್ತಕನ್ನು ಪ್ರಸ್ತುತಪಡಿಸಲಾಗುತ್ತಿದೆ. ಜ್ಞಾನದ ಜಿಜ್ಞಾಸುಗಳು ಸಾಧಕರಾಗಿ ಸಾಧನೆ ಮಾಡಿದಾಗಲೇ ಈ ಪುಸ್ತಕ ಬರೆಯಲು ಸಂಶೋಧನೆ ಮಾಡಿದ ಸಾಧಕಿಯ ಸಾಧನೆಗೆ ಧನ್ಯತಾಭಾವ ಪ್ರಾಪ್ತಿಯಾಗುವುದು.

ಗಾಯತ್ರೀ ಮಂತ್ರದ ಸಾಧಕರು ತಮ್ಮ ಸಾಧನೆಯ ವಿಜಯಪತಾಕೆಯಾಗಿರುವ ಮೋಕ್ಷಾವಸ್ಥೆಯನ್ನು ಹೊಂದಲು ವೇದಜನನಿಯ ಪಾದಪದ್ಮಗಳಲ್ಲಿ ನನ್ನ ಅನಂತ ಪ್ರಾರ್ಥನೆಗಳು.

ಗಾಯತ್ರೀ ತಪೋಭೂಮಿ, ಗುರುಪೂರ್ಣಿಮಾ
ಬುಧವಾರ, 3ನೆಯ ಜುಲೈ 2023

ಸದ್ಗುರು ಪಾದಧೂಳಿನಲ್ಲಿ, ಸಂಗ್ರಹ ಕರ್ತೃ
ಸೌ. ಅನಿತಾ ಅರವಿಂದ ಸರಾಫ



## ದ್ವಿತೀಯ ಪರಿಷ್ಕೃತ ಮುದ್ರಣ

ಗುರು-ಗಾಯತ್ರೀಯರ ಕೃಪೆಯಿಂದ ಕೇವಲ ಐದು ಮಾಸಗಳಲ್ಲಿ 118 ಪುಸ್ತಕಗಳು ಜಿಜ್ಞಾಸು ಓದುಗರನ್ನು ತಲುಪಿರುವವು.
ಆಧ್ಯಾತ್ಮಿಕ ವಿಷಯದಲ್ಲಿ ಅವರಿಗಿರುವ ಆಸಕ್ತಿಯನ್ನರಿತು ಈಗ ಎರಡನೆಯ ಮುದ್ರಣಕ್ಕೆ ಮತ್ತಷ್ಟು ಜ್ಞಾನವನ್ನು ಸೇರಿಸಿ ಪರಿಷ್ಕರಿಸಲಾಗಿದೆ.
ಗಾಯತ್ರೀ ಚೈತನ್ಯವು ಓದುಗರ ಸ್ನೇಹಪರ ಪುಸ್ತಕವೆಂದು ಭಾವಿಸುವೆ.
ಮುಮುಕ್ಷುಗಳು ಅವರ ಗಂತವ್ಯವನ್ನು ತಲುಪಲೆಂದು ಶುಭಹಾರೈಸುತ್ತಾ ಆದ್ಯಾಶಕ್ತಿಯಲ್ಲಿ ಮನಃಪೂರ್ವಕವಾಗಿ ಪ್ರಾರ್ಥಿಸುವೆ.

ಚಂಪಾಷಷ್ಠಿ, ಕ್ರೋಧಿನಾಮ ಸಂವತ್ಸರ
ಶನಿವಾರ, 7ನೆಯ ಡಿಸೆಂಬರ, 2024

ಸದ್ಗುರು ಪಾದಧೂಳಿನಲ್ಲಿ, ಸಂಗ್ರಹ ಕರ್ತೃ
ಸೌ. ಅನಿತಾ ಅರವಿಂದ ಸರಾಫ






ಶೋಭಕೃತ್ ನಾಮ ಸಂವತ್ಸರ, ಆಷಾಢ ಹುಣ್ಣಿಮೆ, ಸೋಮವಾರ, ದಿನಾಂಕ 03-08-2023ರ, ಗುರುಪೂರ್ಣಿಮೆಯ ಪರ್ವದಿನದಂದು ಶ್ರೀಕ್ಷೇತ್ರ ಗಾಯತ್ರೀ ತಪೋಭೂಮಿಯಲ್ಲಿ ಸದ್ಗುರು ಶ್ರೀ ಶ್ರೀ ವಲ್ಲಭ ಚೈತನ್ಯ ಮಹಾರಾಜರ ಸೂಕ್ಷ್ಮ ಉಪಸ್ಥಿತಿಯೊಂದಿಗೆ ಗಾಯತ್ರೀ ಚೈತನ್ಯ ಪುಸ್ತಕದ ಪ್ರಥಮ ಮುದ್ರಣವು ಸಮಷ್ಟಿ ಸೇವೆಗೆ ಸಮರ್ಪಣೆಗೊಂಡಿತು.

ಕಾರ್ಯಕ್ರಮಕ್ಕೆ ಬಂದಂತಹ ಪ್ರೊ।. ಡಾ।. ಮಹದೇವ ಜೋಶಿಯವರು ಮುಖ್ಯ ಅಥಿತಿಗಳಾಗಿದ್ದರು.

ಡಾ।. ಮಹಾದೇವ ಜೋಶಿಯವರು ಕರ್ನಾಟಕ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿರುವರು. ಗಾಯತ್ರೀಗೆ ಸಂಬಂಧಿಸಿದ ಸವಿತೃ ಗಾಯತ್ರೀ ಸಹಿತ 50ಕ್ಕೂ ಹೆಚ್ಚಿನ ಪುಸ್ತಕಗಳನ್ನು ಬರೆದು ಮಾತೆ ಸರಸ್ವತೀಯ ಕೃಪಾಪಾತ್ರರಾಗಿರುವರು.

ಫೋಟೋದಲ್ಲಿ ಲೇಖಕಿ ಸೌ. ಅನಿತಾ ಸರಾಫ, ಶ್ರೀ ಅರವಿಂದ ಸರಾಫ, ಶ್ರೀಯುತ ಮಾಧವ ಜೋಶಿ ಹಾಗೂ ಸೌ. ಪುಷ್ಪಲತಾ ಜೋಶಿ ಅವರನ್ನು ಕಾಣಬಹುದು.





# ಗಾಯತ್ರೀ ಚೈತನ್ಯ ನವ್ಯ ಪುಸ್ತಕ ಕುರಿತು

ದೇವರು ಅಂದರೆ ಸ್ತುತಿಸು, ಹಿರಿಯ ವ್ಯಕ್ತಿ, ರಾಜ, ಶಿಕ್ಷಕ, ಪ್ರಕೃತಿ ಇತ್ಯಾದಿ ಅರ್ಥಗಳನ್ನು ಸಂಬೋಧಿಸುವ ಗೌರವಾನ್ವಿತವಾದ ಅರ್ಥಕೊಡುವ ಪದ. ಇದರೊಡನೆ ಆ ಭಗವಂತನನ್ನು ಎಲ್ಲ ಪ್ರಾಣಿಗಳಿಗೂ ರಕ್ಷಕ, ಪಾಲಕ, ನಿಯಂತ್ರಕ, ಪರಿಶುದ್ಧ, ಸರ್ವಾಂತರ್ಯಾಮಿ, ಅನಾದಿ, ಅನಂತ, ಸನಾತನ, ಕೃಪಾಸಾಗರ ಎಂಬೆಲ್ಲ ಲಕ್ಷಣಗಳಿಂದ ಗುರುತಿಸಲಾಗಿದೆ. ಅಂತಹ ಆ ಪರಮಾತ್ಮನನ್ನು ನಮ್ಮ ಅಂತಃಕರಣದಲ್ಲಿ ಧಾರಣೆ ಮಾಡೋಣ. ಅವನು '**ನಮ್ಮ ಪ್ರಜ್ಞಾ ಕರ್ಮಗಳನ್ನು ಸದಾ ಪ್ರಚೋದಿಸಲಿ**' ಎಂಬುದೇ ಗಾಯತ್ರೀ ಮಂತ್ರದ ಪ್ರಾರ್ಥನೆಯಾಗಿದೆ.

ಈ ಸ್ತುತಿಯು ಪ್ರಾಚೀನ, ಆಧುನಿಕ ಹಾಗೂ ಭವಿಷ್ಯದ ಮಾನವ ಕುಲದ **ಮೂಲಮಂತ್ರ**ವಾಗಿದೆ. ಮಾನವನಾಗಿ ಜನಿಸಿದ ವ್ಯಕ್ತಿಯು ಮೊದಲು ತನ್ನನ್ನು ತಾನು ಅರಿತುಕೊಂಡು, ತನ್ನಲ್ಲಿರುವ **ವಿವೇಕ ಶಕ್ತಿ**ಯಿಂದ ಪ್ರಕೃತಿಸಹಜವಾದ ಮತ್ತು ಪ್ರಜ್ಞಾಪೂರ್ವಕವಾದ ಕರ್ಮಗಳನ್ನು ಮಾಡಲು ಆ ಪರಮೇಶ್ವರ ನಮಗೆ ದಾರಿತೋರಲಿ ಎಂಬ ಬಯಕೆ ಈ ಮಂತ್ರದಲ್ಲಿದೆ. ಕಲುಷಿತವಲ್ಲದ ಮನಸ್ಸು ಏಕಾಗ್ರತೆ ಹೊಂದಿದಾಗ ನೈಜ ಅರ್ಥ ತಿಳಿಯುವಂತೆ, ಈ ಪ್ರಾಪಂಚಿಕ ಭೋಗವಸ್ತುಗಳಿಂದ ಸ್ವಲ್ಪ ಭಿನ್ನನಾಗಿ ಸ್ವಾರ್ಥರಹಿತನಾದಾಗ ಅವನೇ ಹಿರಿಯ, ಅವನೇ ರಾಜ, ಅವನೇ ಶಿಕ್ಷಕ, ಅದುವೇ ಪ್ರಕೃತಿ ಸಹಜ ಸ್ವಭಾವದ ಸಂತ, ದಾಸ, ಶರಣ, ದೇವರೆಂಬಿತ್ಯಾದಿ ಶಬ್ದಗಳಿಂದ ಸಂಬೋಧಿಸುತ್ತೇವೆ.

ಮನುಷ್ಯನು ತನ್ನ ಮನದ ಅಧೀನನಾಗಿರುವುದರಿಂದ **ಮನದ ಶುದ್ಧತೆ** ಅವನ ಶರೀರವನ್ನು ಪ್ರಕಾಶಿಸುವಂತೆ ಮಾಡುವುದು. ಪ್ರಪಂಚದಲ್ಲಿರುವ ಪ್ರಾಣವುಳ್ಳ ಪ್ರತಿಯೊಂದು ಪ್ರಾಣಿಯ ಶರೀರವು ಕೆಲ ಲಕ್ಷಣಗಳಿಂದ ಮತ್ತು ಕ್ರಮದೊಂದಿಗೆ ಇತಿಮಿತಿಯನ್ನು ಹೊಂದಿರುವುದು. ಇದನ್ನು ಮೀರಿದ್ದೇ ಮನಸ್ಸು. ನಾವು ಸಮುದ್ರದ ದಡದಲ್ಲಿ ಕುಳಿತಿರುವಾಗ ಆ ಸಮುದ್ರದ ವಿಶಾಲತೆ, ಅದರ ಆಳ, ಅದರಲ್ಲಿರುವ ಪ್ರಾಣಿಪ್ರಪಂಚದ ವೈಚಿತ್ರ್ಯತೆ, ರತ್ನ ಹವಳಗಳ ವಿಚಾರ, ತೆರೆಗಳ ಸಂಖ್ಯಾ ಚಿಂತನ, ನೀರಿನ ಸಾಂದ್ರತೆ, ಅದರ ಒತ್ತಡ–ಭಾರ ಇವೆಲ್ಲವುಗಳನ್ನು ನಮ್ಮ ಮನಸ್ಸಿನಲ್ಲಿ ಮಾಡಿಕೊಂಡು ಇತರರೊಡನೆ ಚಿಂತನೆ ಮಾಡುತ್ತೇವೆ. ಆದರೆ ನಮ್ಮ ಕರ್ಮೇಂದ್ರಿಯಗಳಿಂದ ಅದ ಇವುಗಳನ್ನು ಅಳೆದು ಪರೀಕ್ಷಿಸಲು ಸಾಧ್ಯವೇ?

ಮಹಾಭಾರತದ ಗೀತೆಯಲ್ಲಿ ಶ್ರೀಕೃಷ್ಣನು ಮೂರುಬಾರಿ ತನ್ನ **ವಿಶ್ವರೂಪ**ವನ್ನು ತೋರಿದ. ಆದರೆ ಅದನ್ನರಿಯಲು ಕೇವಲ ಅರ್ಜುನ ಮತ್ತು ಸಂಜಯ ಮಾತ್ರ ಸಮರ್ಥರಾದರು. ಭಗವಂತನ ವಿಶ್ವರೂಪವನ್ನು ವೇದದಲ್ಲಿ **ಪುರುಷಸೂಕ್ತ**ದಲ್ಲಿ ಚಿಂತಿಸಲಾಗಿದೆ. ಅಂದಿನ ಕಾಲದ ವೇದರಚನಾಕಾರರೂ ಸಹ ತಿಳಿಯದ ಆ ಭಗವಂತನ ವಿಷಯದ ಚಿಂತನೆಯ ಅಲ್ಪಭಾಗವನ್ನು ನಾವು ಇಂದು ತಿಳಿಯುವುದೇನೆಂದರೆ ಮಹಾಕವಿ ಕಾಳಿದಾಸನು ಹೇಳಿದಂತೆ –

**ಮಂದಃ ಕವಿಯಶಃ ಪ್ರಾರ್ಥಿ ಗಮಿಷ್ಯಾಮ್ಯುಪಹಾಸ್ಯತಾಮ್।**

**ಪ್ರಾಂಶುಲಭ್ಯೇ ಫಲೇ ಲೋಭಾದ್ ಉದ್ಬಾಹುರಿವ ವಾಮನಃ।।**

1–3 ರಘುವಂಶ.

ಎಂಬಂತೆ ಪುಟ್ಟಬಾಲಕನು ಹಣ್ಣಿನ ಆಶೆಗಾಗಿ ಎತ್ತರಗಿಡದಲ್ಲಿರುವ ಹಣ್ಣಿಗಾಗಿ ಪ್ರಯತ್ನಿಸಿ ಹಾಸ್ಯಕ್ಕೀಡಾಗುವಂತೆ ಆಗಬಹುದು. ಆದರೆ ಅದೇ ಬಾಲಕ ಕಾಲಕಳೆದಂತೆ ದೊಡ್ಡವನಾಗಿ, ತನ್ನ ಸ್ವಸಾಮರ್ಥ್ಯದಿಂದ ಹಣಗಳಿಸಿ ತನಗೆ, ತನ್ನವರಿಗೆಲ್ಲ ಹಂಚಿ ಸಂತೋಷಪಡುವಂತೆ ಭಗವದ್‌ಪ್ರಾಪ್ತಿಯು ನಿಧಾನವಾಗಿ ದೊರೆಯಬಲ್ಲದು.

ಭಗವಂತನ ಚಿಂತನೆಯು ಆರಂಭದಲ್ಲಿ ಬಲು ಕಷ್ಟವಾದರೂ ಕಾಲಕಳೆದಂತೆ ಕಹಿ–ಸಿಹಿ ಎಂಬ ಸುಖದುಃಖದ ಭ್ರಮೆಯ ಪ್ರಾಪಂಚಿಕ ಅನುಭವಗಳಿಂದ ನಿಧಾನವಾಗಿ ಪರಿವರ್ತನೆಗೊಂಡು ಪಾರಮಾರ್ಥಿಕ ನಿತ್ಯನೂತನವಾದ **ಸಮಾಧಾನ ಮತ್ತು ಶಾಂತಿ**ಯೆಡೆಗೆ ಮನಸ್ಸು ಸಾಗುವುದರಲ್ಲಿ ಸಂದೇಹವಿಲ್ಲ. ಅದಕ್ಕಾಗಿ ಪೂರ್ವಾಗ್ರಹವಿಲ್ಲದ ಮನಸ್ಸು ಮತ್ತು ಕ್ರಮಬದ್ಧವಾದ ಸದಾಚರಣೆಗಳು ಬೇಕು.

ಮನೋನಿಯಂತ್ರಣಕ್ಕಾಗಿಯೇ ಭಾರತೀಯ ಸನಾತನ ಧರ್ಮಶಾಸ್ತ್ರಗಳು ಬೋಧಿಸುತ್ತವೆ. ಅವುಗಳಲ್ಲಿ **ಗಾಯತ್ರೀ ಚೈತನ್ಯ, ವಿಶ್ವದ ಅನಂತ ಅಚ್ಯುತ ಶಕ್ತಿ** ಎಂಬ ಸೌ. ಅನಿತಾ ಅರವಿಂದ ಸರಾಫ ಇವರಿಂದ ಸಂಕಲಿತವಾದ **ಶಾಸ್ತ್ರಗ್ರಂಥ** ಒಂದಾಗಿದೆ. ಶ್ರೀಮದ್ ಆದಿ ಶಂಕರಾಚಾರ್ಯರು ಉಪದೇಶಿಸದಂತೆ –

**ಅಜ್ಞಾನ ತಿಮಿರಾಂದಸ್ಯ ಜ್ಞಾನಾಂಜನ ಶಲಾಕಯಾ।**

**ಚಕ್ಷುರುನ್ಮೀಲಿತಂ ಏನ ತಸ್ಮೈ ಶ್ರೀ ಗುರವೇ ನಮಃ॥**

ಎಂಬ ಉಕ್ತಿಯಂತೆ ಈ ಗ್ರಂಥ ಸಂಪಾದಕರಿಗೆ ಪರಮಪೂಜ್ಯ ಶ್ರೀ ಶ್ರೀ ವಲ್ಲಭ ಚೈತನ್ಯ ಮಹಾರಾಜರು ಗುರುಗಳಾಗಿದ್ದು, ಅವರ ಜ್ಞಾನಾಧಾರದ ಆಶೀರ್ವಾದದಿಂದ ಗಾಯತ್ರೀ ಮಂತ್ರದ ವಿಷಯದಲ್ಲಿ ಸಂಶೋಧನೆ ಮಾಡಲು ಆದೇಶವಾಗಿ, ಅವರ ಅನುಗ್ರಹದೊಂದಿಗೆ ಈ ಮಹಾನ್ 602 ಪುಟಗಳ **ಸಂಶೋಧಿತ ಗ್ರಂಥ** ದಿನಾಂಕ 03-07-2023ರಲ್ಲಿ ಗಾಯತ್ರೀ ತಪೋಭೂಮಿ, ತಡಸದಲ್ಲಿ ಬಿಡುಗಡೆಗೊಂಡಿತು.

ಗ್ರಂಥ ರಚನಾಕಾರರಾದ ಸೌ. ಅನಿತಾ ಅರವಿಂದ ಸರಾಫ ಅವರು ತಮ್ಮ ಜ್ಞಾನದಾಹವನ್ನು ಅಷ್ಟಕ್ಕೆ ನಿಲ್ಲಿಸದೆ ನಿರಂತರ ಪರಿಶ್ರಮ, ಸತತಾಧ್ಯಯನಗಳೊಂದಿಗೆ ಈ ಮಹಾನ್ ಗ್ರಂಥವನ್ನು ಪರಿಷ್ಕರಿಸುತ್ತ ಸಾಗಿರುವುದರಿಂದ, ಹೊಸ ಹೊಸ ಚಿಂತನಗಳು ಅವರ ಮನಸ್ಸಿನಿಂದ ಮೇಲೆದ್ದು ಬರುತ್ತಲಿವೆ. ಅದರ ಭಾಗವೇ ಈ **ಹೊಸ ಅಥವಾ ನವ್ಯ ಕೃತಿ.**

ಈ ಹೊಸದಾದ ದ್ವಿತೀಯ ಮುದ್ರಣದಲ್ಲಿ ಲೇಖಕರು ಹೇಗೆ ಸೃಷ್ಟಿಯಲ್ಲಿ ಪ್ರತಿಯೊಂದು ಅಣುವಿನಲ್ಲಿಯೂ ಪರಮಪವಿತ್ರವಾದ **ಚೈತನ್ಯಶಕ್ತಿ** ಇದೆಯೆಂಬುದನ್ನು ಓದುಗ ಆಸಕ್ತರಿಗೆ ಸರಳವಾಗಿ ಉದಾಹರಣೆಗಳಿಂದ ತಿಳಿಸಿಕೊಡಲು ಪ್ರಯತ್ನಿಸಿ, ಸಫಲರಾಗಿದ್ದಾರೆ.

ಗಾಢವಾದ ವಿಷಯಗಳನ್ನು ದ್ವಿತೀಯ ಮುದ್ರಣದಲ್ಲಿ ಚರ್ಚಿಸಿದ್ದಲ್ಲದೇ, ಸಂದರ್ಭಕ್ಕೆ ಅನುಗುಣವಾಗಿ ಇರುವ ವಿಷಯವನ್ನು ಮತ್ತಷ್ಟು ಜ್ಞಾನದಿಂದ ಅಲಂಕರಿಸಿ, ಹೊಸ ವಿಚಾರಗಳಿಂದ ಅರಿವನ್ನು ವಿಶಾಲಗೊಳಿಸಿದ್ದಾರೆ.

ಪ್ರಾಚೀನ **ಅಖಂಡ ಭಾರತ**ದ ಭೌಗೋಲಿಕ ಪ್ರದೇಶಗಳಿಗೆ ಸುಷುಮ್ನಾ ನಾಡಿ, ಚಕ್ರಗಳು ಹಾಗೂ ಗ್ರಂಥಿಗಳು ಹೇಗೆ ಹೊಂದಾಣಿಕೆಯೆಂಬ ಪರಿಕಲ್ಪನೆಯನ್ನು ಮಾಡಿಕೊಟ್ಟ ಇವರ ಪರಿಶ್ರಮಕ್ಕೆ **ಗುರುಕೃಪೆ** ಮತ್ತೆ ಮತ್ತೆ ದೊರೆಯಲೆಂದು ಹಾರೈಸುವೆ.

ನಾನು ಗಾಯತ್ರೀ ಚೈತನ್ಯ ಪುಸ್ತಕವನ್ನು ಓದಿದ ನಂತರ, ಸೌ. ಅನಿತಾ ಅರವಿಂದ ಸರಾಫ ಅವರಿಗೆ ಈ ಕೃತಿಯನ್ನು ಕುರಿತು **D. Litt. (Doctor of Literature)** ಗೆ ಅರ್ಜಿಯನ್ನು ಸಲ್ಲಿಸಲು ತಿಳಿಸಿರುವೆ!

ಧಾರವಾಡ<br>25-09-2024

ಪ್ರೊ. ಮಹಾದೇವ ನಾ. ಜೋಶಿ ಎಂ. ಎ., ಪಿಎಚ್. ಡಿ.<br>ಭೂತಪೂರ್ವ ಕುಲಸಚಿವರು ಮತ್ತು ಎಮರಟಸ್ ಪ್ರಾಧ್ಯಾಪಕರು<br>ಸಂಸ್ಕೃತ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.



# ಗಾಯತ್ರೀ ಚೈತನ್ಯಕ್ಕೆ ಮತ್ತಷ್ಟು ಚೈತನ್ಯ

## ದೈವೀ ಸನ್ನಿಧಾನದಲ್ಲಿ ಗಾಯತ್ರೀ ಚೈತನ್ಯ







**1. ಕುಲದೇವಿಯಾದ ಭಗವತೀ ಶ್ರೀ ಬನಶಂಕರೀ, ಮುಂಬೈ.**

**(ಗುರುವಿನತ್ತ ಕರೆದೊಯ್ಯುವವಳು ಕುಲದೇವಿ)**

**2. ಪಂಚಮುಖಿ ಭಗವತೀ ಗಾಯತ್ರೀ, ಗಾಯತ್ರೀ ತಪೋಭೂಮಿ, ತಡಸ.**

**3. ಏಕಮುಖಿ ಭಗವತೀ ಗಾಯತ್ರೀ, ಶಾಂತಿಕುಂಜ, ಹರಿದ್ವಾರ.**

## ಋಷಿ ಸನ್ನಿಧಾನದಲ್ಲಿ ಗಾಯತ್ರೀ ಚೈತನ್ಯ






**1. ಋಷಿ ವಿಶ್ವಾಮಿತ್ರರು, ಶಾಂತಿಕುಂಜ, ಹರಿದ್ವಾರ.**


**2. ಋಷಿ ಭಗೀರಥರು, ಗಂಗೋತ್ರೀಧಾಮ.**


**ವಿಶೇಷ ಜ್ಞಾನ:**

ಗಾಯತ್ರೀ ಮಂತ್ರದ ಸ್ಥೂಲರೂಪವು ಗಂಗೆಯಾದರೆ, ದೇವನದಿ ಗಂಗೆಯ ಸೂಕ್ಷ್ಮ ರೂಪವು ಗಾಯತ್ರೀಯಾಗಿದೆ.

ಬ್ರಹ್ಮರ್ಷಿ ವಿಶ್ವಾಮಿತ್ರರು ಗಾಯತ್ರೀಯನ್ನು ನೀಡಿದರೆ, ಮಹಾತಪಸ್ವಿ ಭಗೀರಥರು ಗಂಗೆಯನ್ನು ನೀಡಿರುವರು. ಇವು ಮನುಕುಲಕ್ಕೆ ದೊರೆತಂತಹ ಅದ್ವಿತೀಯ ಕಾಣಿಕೆಗಳಾಗಿವೆ.

## ಸದ್ಗುರುದೇವರ ಸನ್ನಿಧಾನದಲ್ಲಿ ಗಾಯತ್ರೀ ಚೈತನ್ಯ



**1. ಪ. ಪೂ. ಶ್ರೀ ಶ್ರೀ ತೈಲಂಗಧರ ಸ್ವಾಮಿಗಳು, ಪಂಚಗಂಗಾ ಘಾಟ, ವಾರಣಾಸಿ.**


**2. ಪ. ಪೂ. ಮಹಾತ್ಮಾ ತೈಲಂಗ ಸ್ವಾಮಿಗಳ ಆಶ್ರಮದಲ್ಲಿಯ ಧ್ಯಾನಮಂದಿರ, ಪಂಚಗಂಗಾ ಘಾಟ, ವಾರಣಾಸಿ.**

**3. ಪ. ಪೂ. ಶ್ರೀ ಶ್ರೀ ಕೃಷ್ಣೇಂದ್ರ ಗುರುಗಳು, ಗಾಯತ್ರೀ ತಪೋಭೂಮಿ, ತಡಸ.**

**4. ಪ. ಪೂ. ಶ್ರೀ ಶ್ರೀ ಕಾಶೀ ಬಸವರಾಜೇಂದ್ರ ಗುರುಗಳು, ರಾಯಚೂರು.**

**5, 6. ಪ. ಪೂ. ಶ್ರೀ ಶ್ರೀ ವಲ್ಲಭ ಚೈತನ್ಯ ಮಹಾರಾಜರು, ಗಾಯತ್ರೀ ತಪೋಭೂಮಿ, ತಡಸ. (2 ಫೋಟೋಗಳು)**


## ಪೀಠಾಧೀಶರ ಸನ್ನಿಧಾನದಲ್ಲಿ ಗಾಯತ್ರೀ ಚೈತನ್ಯ








1. ಪ. ಪೂ. ಜಗದ್ಗುರು ಶ್ರೀ ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮಿಗಳು, ದಕ್ಷಿಣಾಮ್ನಾಯ, ಶೃಂಗೇರಿ ಶಾರದಾಪೀಠ.
2. ಪ. ಪೂ. ಜಗದ್ಗುರು ಶ್ರೀ ಶ್ರೀ ಶ್ರೀ ಅವಿಮುಕ್ತೇಶ್ವರಾನಂದ ಸರಸ್ವತೀ ಸ್ವಾಮಿಗಳು, ಉತ್ತರಾಮ್ನಾಯ, ಬದರಿಕಾಶ್ರಮ, ಜ್ಯೋತಿರ್ಮಠ.
3. ಪ. ಪೂ. ಜಗದ್ಗುರು ಶ್ರೀ ಶ್ರೀ ಶ್ರೀ ಡಾ|. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಕಾಶೀಪಂಚಪೀಠ, ಜಂಗಮವಾಡಿಮಠ, ವಾರಣಾಸಿ.




## ಸಂತ-ಮಹಾತ್ಮರ ಸನ್ನಿಧಾನದಲ್ಲಿ ಗಾಯತ್ರೀ ಚೈತನ್ಯ








1. ಪ. ಪೂ. ಶ್ರೀ ಶ್ರೀ ವಿಶ್ವಬಂಧುಗಿರಿ ಸ್ವಾಮೀಜಿಯವರು, ಗಾಯತ್ರೀ ಕುಟೀರ, ಪಾಟಾ, ಉತ್ತರಕಾಶಿ.
2. ಪ. ಪೂ. ಪಂಡಿತ್ ಶ್ರೀರಾಮ ಶರ್ಮಾ ಆಚಾರ್ಯರು, ಶಾಂತಿಕುಂಜ, ಹರಿದ್ವಾರ.
3. ಪ. ಪೂ. ತಪೋವನೀ ಸಂತ ಶ್ರೀ ಶ್ರೀ ಸುಭದ್ರಾ ಮಾತಾಜಿಯವರು, ಗಂಗೋರಿ, ಉತ್ತರಕಾಶಿ.
4. ಪ. ಪೂ. ಶ್ರೀ ಶ್ರೀ ಪ್ರೇಮಾನಂದ ಸರಸ್ವತೀ ಸ್ವಾಮೀಜಿಯವರು, ಶಿವಾನಂದ ಸೇವಾ ಸಮಿತಿ, ಗಣೇಶಪುರ, ಉತ್ತರಕಾಶಿ.





**5. ಪ. ಪೂ. ಶ್ರೀ ಶ್ರೀ ಗೋಪಿಬಾಬಾ, ದಂಡೀ ಆಶ್ರಮ, ಗಂಗೋತ್ರೀಧಾಮ.**

**6. ಪ. ಪೂ. ಶ್ರೀ ಶ್ರೀ ಪ್ರಣವಾನಂದತೀರ್ಥ ಸ್ವಾಮೀಜಿಯವರು, ತುರುವೇಕೆರೆ, ತುಮಕೂರು.**

**7. ಪ. ಪೂ. ಶ್ರೀ ಶ್ರೀ ಪ್ರಣವಾನಂದ ತೀರ್ಥ ಸ್ವಾಮೀಜಿಯವರು, ಅದ್ವೈತವಿದ್ಯಾಶ್ರಮ, ಪದ್ಮರಾಜ ನಗರ, ಹುಬ್ಬಳ್ಳಿ.**

**8. ಪ. ಪೂ. ಶ್ರೀ ಶ್ರೀ ಗಿರಿಜಾನಂದ ಸರಸ್ವತೀ ಸ್ವಾಮೀಜಿಯವರು, ನಿರಂಜನೀ ಆಖಾಡಾ, ಉತ್ತರಕಾಶಿ.**


**9. ಪ. ಪೂ. ಶ್ರೀ. ಶ್ರೀ ಆತ್ಮಸ್ವರೂಪ ಸ್ವಾಮೀಜಿಯವರು, ಈಶಾವಾಸ್ಯ ಕೃಷ್ಣಾಶ್ರಮ, ಗಂಗೋತ್ರಿಧಾಮ.**



**10. ಪ. ಪೂ. ಶ್ರೀ ಶ್ರೀ ವಿಶ್ವೇಶ್ವರಾನಂದ ಸ್ವಾಮೀಜಿಯವರು ಹಾಗೂ ಸಾಧ್ವೀ ಕುಮಾರಿ ಸೋಮಶೇಖರಿಯವರು, ಓಂಕಾರಾನಂದಾಶ್ರಮ, ಹೃಷಿಕೇಶ.**




**11. ಪ. ಪೂ. ಮಹಂತ ಶ್ರೀ ಕೃಷ್ಣಗಿರಿ ಮಹಾರಾಜರು, ಮನಮಹೇಶ ಮಹಾದೇವ ಯೋಗ ಆಶ್ರಮ, ಹೃಷಿಕೇಶ.**

**12. ಪ. ಪೂ. ಶ್ರೀ ಶ್ರೀ ಭರತ್ ಮಹಾರಾಜರು ಮತ್ತು ಪ. ಪೂ. ಮಹಂತ ಶ್ರೀ ನವಮಿಗಿರಿ ಸ್ವಾಮೀಜಿಯವರು, ದಂಡೀ ಆಶ್ರಮ, ಗಂಗೋತ್ರಿಧಾಮ ಹಾಗೂ ಪ. ಪೂ. ಡಾ|. ಶ್ರೀ ಸುರೇಶಾನಂದ ಸ್ವಾಮೀಜಿಯವರು, ಮಥುರಾ.**

**13. ಪ. ಪೂ. ಶ್ರೀ ಶ್ರೀ ಮನೋಜ ಕುಮಾರ ಶರ್ಮಾರವರು, ಆಗಮ ನಿಗಮ ಸಂಸ್ಥಾನ, ಹರಿಶ್ಚಂದ್ರರಸ್ತೆ, ವಾರಣಾಸಿ.**



14. ಪ. ಪೂ. ಶ್ರೀ ಶ್ರೀ ಚಿದಾನಂದ ಸರಸ್ವತೀ ಸ್ವಾಮೀಜಿಯವರು, ಪರಮಾರ್ಥ ನಿಕೇತನ, ಹೃಷಿಕೇಶ.

15. ಸುಪ್ರಸಿದ್ಧ ಗಂಗಾ ಆರತಿ ಸಮಯದಲ್ಲಿ ಪ. ಪೂ. ಶ್ರೀ ಶ್ರೀ ಚಿದಾನಂದ ಸರಸ್ವತೀ ಸ್ವಾಮೀಜಿಯವರು ಹಾಗೂ ಸಾಧ್ವಿ ಭಗವತೀ ಸರಸ್ವತೀಯವರು, ಪರಮಾರ್ಥ ನಿಕೇತನ, ಹೃಷಿಕೇಶ.

16. ಪ. ಪೂ. ಶ್ರೀ ಶ್ರೀ ಲಲಿತಾ ಮಾತಾಜಿಯವರು, ಗಂಗೋತ್ರಿಧಾಮ.





17, 18. ಪ. ಪೂ. ಶ್ರೀ ಶ್ರೀ ಕಾಲೂ ಮಹಾರಾಜರು, ಸಂತ ಸುಭದ್ರಾ ಮಾತಾಜಿಯವರ ಆಶ್ರಮ, ಧರಾಲಿ. (2ಪೋಟೋಗಳು)


19. ಬೌದ್ಧ ಸಂನ್ಯಾಸಿನಿ ಪ. ಪೂ. ಶೀಯ್‌ಲಾ, ಲಂಡನ್.


20. ಪ. ಪೂ. ಶ್ರೀ ಶ್ರೀ ಭೈರವನಾಥ ಬಾಬಾಜಿಯವರು, ಗಂಗೋತ್ರಿಧಾಮ.

21. ಪ.ಪೂ. ಶ್ರೀ ಶ್ರೀ ಚಿನ್ಮಯ ಪಾಂಡ್ಯಾರವರು, ಶಾಂತಿಕುಂಜ, ಹರಿದ್ವಾರ.

## ಗೃಹಸ್ಥಜೀವನದಲ್ಲಿದ್ದು ಸಾಧನೆಯ ಉತ್ತುಂಗದಲ್ಲಿರುವ ಸಾಧಕರ ಸನ್ನಿಧಾನದಲ್ಲಿ ಗಾಯತ್ರೀ ಚೈತನ್ಯ



**1. ಶ್ರೀಯುತ ಕೆ. ಶ್ರೀನಿವಾಸ ಶಾಸ್ತ್ರಿ, ಬೆಂಗಳೂರು.**

**2, 3. ಶ್ರೀಯುತ ನೀಲಕಂಠ ಧನಶ್ರೀ, ಮಹಾತಪಸ್ವಿ ಶ್ರೀ ಶ್ರೀ ಕುಮಾರ ಸ್ವಾಮಿಗಳ ತಪೋವನ, ಧಾರವಾಡ.(2 ಫೋಟೋಗಳು)**

**4. ಡಾ|. ರಾಮಪ್ರಿಯ, ಬೆಂಗಳೂರು.**

**5. ಮಹಾಮಹೋಪಾಧ್ಯಾಯ ವಿದ್ವಾನ್ ಡಾ. ಕೆ. ಜಿ. ಸುಬ್ರಾಯ ಶರ್ಮಾ, ಬೆಂಗಳೂರು.**

**6. ಶ್ರೀಯುತ ಕೈಲಾಶ ಮಹಾಜನ್, ಶಾಂತಿಕುಂಜ, ಹರಿದ್ವಾರ.**

**7. ಶ್ರೀಯುತ ಜನಾರ್ದನ, ಬಂಟ್ವಾಳ.**

**8. ಶ್ರೀಮತಿ. ಪದ್ಮಾವತಿ ಎ. ಎಸ್, ಬೆಂಗಳೂರು.**

**9. ಶ್ರೀಯುತ ತೀರ್ಥರಾಮ ವಳಲಂಬೆ, ಮಂಗಳೂರು.**

# ಜಿಜ್ಞಾಸೆ

ಕ್ರಿ. ಶ. 1996ರಲ್ಲಿ ಪ್ರಥಮ ಬಾರಿಗೆ ನನ್ನ ಸದ್ಗುರುದೇವರ ದರ್ಶನಯುಕ್ತ ಪರಿಚಯವಾದಾಗ, ಅವರು **ಗಾಯತ್ರೀ ಸಾಧಕ**ರೆಂದು ತಿಳಿಯಿತು.
ಆವರೆಗೂ ಗಣಪತಿ, ಶಿವ, ದತ್ತ, ರಾಮ, ಕೃಷ್ಣ, ಹನುಮ, ದೇವಿ … ಈ ದೇವ-ದೇವಿಯರ ಜಪ ಮಾಡುವುದನ್ನು ಅರಿತಿದ್ದೆ ಹಾಗೂ ಸಂಧ್ಯಾವಂದನೆಯ ಅಂಗವಾಗಿ ಗಾಯತ್ರೀ ಮಂತ್ರವನ್ನು ಜಪಿಸುವುದು ನೋಡಿದ್ದೆನಾದರೂ, ತಮ್ಮ ಜೀವನವನ್ನೇ **ಗಾಯತ್ರೀ ಮಂತ್ರದ ಸಾಧನೆ**ಗೆ ಅರ್ಪಿಸಿಕೊಂಡ ಸಾಧಕರನ್ನು ನೋಡಿರಲಿಲ್ಲಾ!
ಆಗ ನನ್ನಲ್ಲಿ **ಜಿಜ್ಞಾಸೆ ಜಾಗೃತ**ವಾಯಿತು!
ಸರಳವಾಗಿ ಜಪಿಸುವ ಇಷ್ಟೆಲ್ಲಾ ದೇವಿ-ದೇವತೆಗಳ ಮಂತ್ರವಿದ್ದರೂ –
ಉಚ್ಚರಿಸಲು ಕ್ಲಿಷ್ಟವಾದ ಈ ಮಂತ್ರ, ಜಪದ ಸಾಧನೆ ಇವರೇಕೆ ಮಾಡುತ್ತಿದ್ದಾರೆ?
ಗಾಯತ್ರೀ ಮಂತ್ರದ ಜಪ ಮಾಡುತ್ತಿದ್ದಾರೆಂದರೆ ಇದರ ಹಿಂದಿರುವ ವಿಶೇಷತೆಯೇನು?
ಈ ಮಂತ್ರದ ಅರ್ಥವೇನು?
ಯಾವ ದೇವ ಅಥವಾ ದೇವಿಯ ಉಪಾಸನೆ ಇದಾಗಿದೆ?
ಗಾಯತ್ರೀ ಮಂತ್ರವನ್ನು ಪ್ರಥಮವಾಗಿ ಯಾರು ಜಪಿಸಿರುವರು?
ಈ ಮಂತ್ರವನ್ನು ಹೇಗೆ ಜಪಿಸಬೇಕು?
ಇತ್ಯಾದಿ … ಇತ್ಯಾದಿ … ಉತ್ತರ ತಿಳಿಯದ ಪ್ರಶ್ನೆಗಳು ನನಗೆದುರಾದವು.
ಉತ್ತರವನ್ನು ಕಂಡುಕೊಳ್ಳಲು ಗಾಯತ್ರೀ ಮಂತ್ರದ ಹಿನ್ನೆಲೆಯ ಅಧ್ಯಯನ ಪ್ರಾರಂಭವಾಯಿತು … ಅರ್ಥಾತ್, **ಬ್ರಹ್ಮ ಋಷಿ ವಿಶ್ವಾಮಿತ್ರರ ಜೀವನ ಚರಿತ್ರೆ**!

ಇದರಲ್ಲಿ ಅನೇಕಾನೇಕ ಕುತೂಹಲಕರ ವಿಷಯಗಳು ನನ್ನನ್ನು ರಂಜಿಸತೊಡಗಿದವು. ಇದು ಇಷ್ಟಕ್ಕೆ ನಿಂತಿದ್ದರೆ ಇಂದು ನಿಮ್ಮ ಮುಂದೆ ಈ ಸಂಕಲನಗೊಂಡ ಪುಸ್ತಕ ಪ್ರಸ್ತುತವಾಗುತ್ತಿರಲಿಲ್ಲಾ!

ಮನೋರಂಜನೆ ನನ್ನ ಮನಕ್ಕೆ ಹಲವಾರು ಪ್ರಶ್ನೆಗಳನ್ನು ನೀಡಿತು, ಇವುಗಳಿಗೆ **ಕ್ಷತ್ರಿಯ ರಾಜ ವಿಶ್ವರಥರು (ವಿಶ್ವಾಮಿತ್ರರು) ನಾಯಕ**ರಾದರು!
ಉತ್ತರಗಳಿಗೆ ಹುಡುಕಾಟ ಮುಂದುವರಿಯಿತು.

ಕ್ರಿ. ಶ. 2007ನೆಯ ಇಸ್ವಿಯಲ್ಲಿ, ಮೊಟ್ಟ ಮೊದಲು ನನ್ನ ಸದ್ಗುರುಗಳಿಗೇನೇ ಈ ವಿಷಯದಲ್ಲಿ ಪ್ರಶ್ನೆ ಕೇಳಲು ಪ್ರಾರಂಭಿಸಿದೆ.
ಅವರು ನೀಡಿದ ಉತ್ತರದಿಂದ ನನಗೆ ಸಮಾಧಾನವಾಗದೆ ಮತ್ತಷ್ಟು ಕುತೂಹಲಭರಿತ ಪ್ರಶ್ನೆಗಳಿಗೆ ನಾಂದಿಯಾಯಿತು!


ಗಾಯತ್ರೀ ಮಂತ್ರಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಖರೀದಿಸಿ ಅಧ್ಯಯನ ಪ್ರಾರಂಭಿಸಿದೆ ಹಾಗೂ ಕಲಿಕೆಯಲ್ಲಿ ದೊರೆತ ಮುಖ್ಯ ವಿಷಯಗಳನ್ನು ಒಂದೆಡೆ ಬರೆದಿಡಲಾರಂಭಿಸಿದೆ.

ಕಾಲಕಾಲಕ್ಕೆ ಸತ್ಸಂಗದ ಮೂಲಕ ನನ್ನ ಸದ್ಗುರುಗಳಿಂದ ಪ್ರಶ್ನೆಗಳಿಗೆ ಉತ್ತರ ಪಡೆಯುತ್ತಿದ್ದೆ. ಇದರೊಂದಿಗೆ ಸದ್ಗುರುಗಳ ಸಾಧನಾ ಜೀವನವನ್ನು ವಿಸ್ತಾರವಾಗಿ ಅರಿಯುವ ತೀವ್ರ ಬಯಕೆಯಾಯಿತು.

ಕುತೂಹಲ ತಣಿಸಿಕೊಳ್ಳಲು ಓದುವುದು-ಬರೆಯುವುದು ಮುಂದುವರಿದಾಗ, **ಮಾತೆ ಗಾಯತ್ರೀಯ ಅಯಾಚಿತ ಅನುಗ್ರಹ**ದಿಂದ ನನ್ನ ಸದ್ಗುರುಗಳ ಜೀವನ ಚರಿತ್ರೆ '**ಸದ್ಗುರು ದರ್ಶನ**' ರಚನೆಗೊಂಡಿತು.

ಈ ಶುಭೋದಯದ ಫಲವಾಗಿ ಕ್ರಿ. ಶ. 2011ರಲ್ಲಿ ಸ್ವತಃ ಗುರುದೇವರಿಂದ **ಗಾಯತ್ರೀ ಮಂತ್ರ**ದ ವಿಷಯ ಕುರಿತು ಪುಸ್ತಕವನ್ನು ಬರೆಯಲು ಆಜ್ಞೆಯಾಯಿತು!
ಅಂತೂ ಜಿಜ್ಞಾಸೆಯಿಂದ ಪ್ರಶ್ನೆಗಳಿಗೆ ಉತ್ತರಗಳನ್ನು ಅರಸುತ್ತಾ ನಡೆದ ನನ್ನ ಸಾಧನಾಧ್ಯಯನ, ಹನ್ನೆರಡು ವಸಂತಗಳನ್ನು ಕಂಡಿತು. ಗುರುದೇವರ ಕೃಪಾಶೀರ್ವಾದದಿಂದ ಈಗ ಪುಸ್ತಕದ ರೂಪವನ್ನು ಪಡೆದು ಸಮಷ್ಟಿ ಸೇವೆಗೆ ಅರ್ಪಣೆಯಾಗಿರುವುದು ಅತ್ಯಂತ ಹೆಚ್ಚು **ಆತ್ಮತೃಪ್ತಿ** ನೀಡಿದೆ.

ಆಧ್ಯಾತ್ಮದ ಹೊಂಬೆಳಕು/ಜ್ಞಾನದ ತೇಜಸ್ಸು/ಅರಿವಿನ ಪ್ರಕಾಶವಾದ **ಸಮರ್ಥ ಸದ್ಗುರು ಶ್ರೀ ಶ್ರೀ ವಲ್ಲಭ ಚೈತನ್ಯ ಮಹಾರಾಜರ** ಪಾದಪದ್ಮಗಳಲ್ಲಿ ಭಕ್ತಿಪೂರ್ವಕ ನಮನಗಳು.



**ಮಹಾಶಕ್ತಿ ಗಾಯತ್ರೀ ನಮ್ಮೆಲ್ಲರನ್ನು ಸದಾ ರಕ್ಷಿಸಲಿ**

# ಅನುಕ್ರಮಣೀ

## ಪಂಚಪರಿಚ್ಛೇದಗಳಲ್ಲಿ ಗಾಯತ್ರೀ ಸ್ವಾಧ್ಯಾಯ


| ಭಾಗ – 1 | ಗುರು | 1-25 |
|---|---|---|
| ▪ | **ಗಾಯತ್ರೀ ಮಂತ್ರ** | 1 |
| ▪ | **ಜ್ಞಾನಪ್ರದ ಗುರುಗಳಿಗೆ ವಂದನೆಗಳು – ಗುರುಸ್ಮರಣೆ** | 2-3 |
| ▪ | **ಸಮರ್ಪಣೆ** | 4-5 |
| ▪ | **ಕೃತಜ್ಞತೆಗಳು** | 6 |
| ▪ | **ಪುಸ್ತಕದ ಹೆಸರೇಕೆ ಗಾಯತ್ರೀ ಚೈತನ್ಯ?** | 7-12 |
| ▪ | **ಗುರುಸ್ವರೂಪ** | 13-21 |
| | ಗುರು, ಮಹಾತ್ಮಾ ತೈಲಂಗಧರರ ನುಡಿಯಲ್ಲಿ ಗುರು, ಗುರುವಿಗೆ ಸಂಬಂಧಿಸಿದ ಕೆಲವು ಮುಖ್ಯ ಪದಗಳು, ಗುರು ಗಾಯತ್ರೀ ಮಂತ್ರ. | |
| | ಸದ್ಗುರು, ಪರಮಪವಿತ್ರ ಗಾಯತ್ರೀ ಮಂತ್ರಕ್ಕೆ ಶಾಪ, ನನ್ನ ಸದ್ಗುರು. | |
| ▪ | **ಸತ್ಸಂಗ** | 22-25 |
| | ತಪೋವನೀ ಮಾ, ಸಾಧನೆ, ಗುರು, ಸದ್ಗುರು. | |

| ಭಾಗ – 2 | ಸಾಧನೆ | 26-50 |
|---|---|---|
| ▪ | **ಸಾಧನೆ, ಸಾಧಕರು, ಸಾಧ್ಯ, ಗುರು-ಶಿಷ್ಯ-ಮಂತ್ರಾಭಿಮಾನಿ ದೇವತೆ, ಸಾಧಕರಿಗೆ ಮುಖ್ಯ ಸೂಚನೆಗಳು, ಫಲ** | 26-30 |
| ▪ | **ಗುರುಧ್ಯಾನ, ದೀಕ್ಷೆಗಳು, ಸಾಧಕರಿಗೆ ಮತ್ತಷ್ಟು ಸೂಚನೆಗಳು, ವಿಶೇಷ ಜ್ಞಾನ, ಯೋಗನಿದ್ರೆ** | 31-35 |
| ▪ | **ಗಾಯತ್ರೀ ಮಂತ್ರ ಸಂಸ್ಕೃತ ಭಾಷೆಯಲ್ಲೇಕೆ?** | 36-37 |
| ▪ | **ಗಾಯತ್ರೀ ಗುರುಮಂತ್ರವೇಕೆ?** | 38 |
| ▪ | **ಆದ್ಯಾಶಕ್ತಿ ಭಗವತೀ ಗಾಯತ್ರೀಯನ್ನೇಕೆ ಗುರುರೂಪದಲ್ಲಿ ಪೂಜಿಸಬೇಕು?** | 39-40 |
| ▪ | **ಗಾಯತ್ರೀ ಮಂತ್ರ ಹೇಗೆ ಕೆಲಸ ಮಾಡುತ್ತದೆ?** | 41 |
| ▪ | **ಜಪದಲ್ಲಿ ವಿಧಾನಗಳು** | 42-43 |
| | ಇಂದ್ರಿಯ, ವಾಣಿ, ವಿಧ, ಉಸಿರು, ಪ್ರಜ್ಞೆ ಹಾಗೂ ತತ್ತ್ವಗಳಿಗೆ ಅನುಸಾರ. | |
| ▪ | **ಜಪೋಪಾಸನೆ** | 44-50 |
| | ಜಪಮಾಲೆಗಳ ವಿಧಗಳು, ಪರಮಶ್ರೇಷ್ಠ ಜಪ, ಜಪಮಾಲೆ ಹಾಗೂ ತೋರುಬೆರಳು, ಜಪಮಾಲೆ ಹಾಗೂ ಮೇರುಮಣಿ, ಜಪಮಾಲೆಯ ಮಹತ್ವ, ಪರ್ವಜಪ, ರುದ್ರಾಕ್ಷಿ ಜಪಮಾಲೆ, ಜಪಮಾಲೆ ಕುರಿತು ಮತ್ತಷ್ಟು ಮಾಹಿತಿ, ಜಪ ಮಾಡುವಾಗ ಆಸನದ ಪ್ರಾಧಾನ್ಯತೆ, ಜಪ ಮಾಡುವ ಸ್ಥಳದ ಪ್ರಾಮುಖ್ಯತೆ. | |

| ಭಾಗ – 3 | ಪರಬ್ರಹ್ಮ | 51-69 |
|---|---|---|
| ▪ | **ನಿರ್ಗುಣ, ನಿರಾಕಾರ, ಸಗುಣ, ಸಾಕಾರ** | 51-52 |
| ▪ | **ಸಗುಣ-ನಿರ್ಗುಣ ಶರೀರಗಳು, ಅವಸ್ಥೆಗಳಲ್ಲಿ ಶರೀರಗಳು, ದೇವರು-ಸಗುಣ-ನಿರ್ಗುಣ** | 52-54 |
| ▪ | **ಪರಬ್ರಹ್ಮ, ಪರಬ್ರಹ್ಮದ ವಿಶೇಷತೆಗಳು, ಪರಬ್ರಹ್ಮತತ್ತ್ವ, ಪರ, ಅಪರ, ನಿರ್ಗುಣ-ಸಗುಣ ಅನುಭೂತಿ** | 55-60 |
| ▪ | **ತತ್ತ್ವ ವಿವೇಚನೆ** | 61-64 |
| | ಜೀವ, ಮಾಯೆ, ಅಹಂಕಾರ, ಅವಿದ್ಯೆ, ಆತ್ಮ, ಅಂತಃಕರಣ. | |
| ▪ | **ಜಿಜ್ಞಾಸು ಯಾರು?** | 65-69 |
| | ಜಿಜ್ಞಾಸು, ಮುಮುಕ್ಷು, ಬ್ರಹ್ಮವಿದ್ಯೆ, ಅನುಭಾವಿಗಳ ನುಡಿ. | |

| ಭಾಗ – 4 | ಗಾಯತ್ರೀ ಪರಮತತ್ತ್ವ | 70-160 |
|---|---|---|
| ▪ | **ಸೃಷ್ಟಿ ರಚನೆ** | 70-74 |
| | ಉದ್ಗೀಥ, ಪ್ರಣವ ಗಾಯತ್ರೀ ಮಂತ್ರ, ಸೃಷ್ಟಿಯ ವೈದಿಕ ವ್ಯಾಸಂಗ, ವಿಶೇಷ ಜ್ಞಾನ, ಗಾಯತ್ರೀ ಮಂತ್ರದ ಉಗಮ, ಪುರಾಣದಲ್ಲಿರುವ ವೈಜ್ಞಾನಿಕ ವಿಸ್ಮಯ. | |
| ▪ | **ಗಾಯತ್ರೀ ಪರಮತತ್ತ್ವ** | 75-79 |
| | ಗಾಯತ್ರೀ, ಛಂದಸ್ಸು. | |
| ▪ | **ಮಂತ್ರ** | 80-86 |
| | ಮಂತ್ರದ ಚಿಂತನೆ, ಅಕ್ಷರ, ಶಬ್ದ ಮತ್ತು ಮಂತ್ರ, ಪ್ರಣವಾಕ್ಷರ, ಬೀಜಮಂತ್ರಗಳು, ಮಂತ್ರೋಪಾಸನೆಯ ನಿಯಮಗಳು, ಮಂತ್ರ ಸಿದ್ಧಿ, ಉಪಾಸನಾ ಫಲ, ಮಂತ್ರದ ವಿಷಯಕ್ಕೆ ಸಂಬಂಧಿಸಿದ ಕೆಲವು ಮುಖ್ಯ ಪದಗಳು. | |
| ▪ | **ಗಾಯತ್ರೀ ಮಂತ್ರ ವಿಜ್ಞಾನ** | 87-89 |
| | ಗಾಯತ್ರೀ, ಗಾಯತ್ರೀ ಮಹಾಮಂತ್ರ, ತತ್ತ್ವ, ತತ್ತ್ವಕ್ಕೆ ಸಂಬಂಧಿಸಿದ ಕೆಲವು ಮುಖ್ಯ ಪದಗಳು. | |
| ▪ | **ಗಾಯತ್ರೀ ಮಂತ್ರ, ಸಾವಿತ್ರೀ ಮಂತ್ರ, ಗುರುಮಂತ್ರ, ಸಂಧ್ಯಾ ಮಂತ್ರ** | 90 |
| ▪ | **ಗಾಯತ್ರೀ ಮಂತ್ರಾರ್ಥ ಚಿಂತನೆ** | 91-98 |
| | ಗಾಯತ್ರೀ ಮಂತ್ರದ ಸಾಧಕರು ಸತ್ಯದ ಸಂಶೋಧಕರು, ಗಾಯತ್ರೀ ಮಂತ್ರದಲ್ಲಿರುವ ಅಕ್ಷರಗಳು, ಬ್ರಹ್ಮ ಗಾಯತ್ರೀ ಮಂತ್ರದ ಅರ್ಥ, ವಿಶ್ವಾಮಿತ್ರ ಗಾಯತ್ರೀ ಮಂತ್ರದ ಅರ್ಥ, ಸುಪ್ರಸಿದ್ಧ ಗಾಯತ್ರೀ ಮಂತ್ರಾರ್ಥ 24 ಚಿಂತನೆಗಳು, ಗಾಯತ್ರೀ ಹೃದಯದಲ್ಲಿ ಗಾಯತ್ರೀ ಮಂತ್ರ. | |
| ▪ | **ಗಾಯತ್ರೀ ಮಂತ್ರದ ವಿಶಿಷ್ಟ ವಿಧಗಳು** | 99-108 |
| | ಬ್ರಹ್ಮ ಗಾಯತ್ರೀ, ವಿಶ್ವಾಮಿತ್ರ ಗಾಯತ್ರೀ, ಪಂಚಾವಸಾವ ಗಾಯತ್ರೀ, ಷಡೋಂಕಾರ ಗಾಯತ್ರೀ, ಸಂಪುಟ ಗಾಯತ್ರೀ, ರಜೋ/ಚತುಷ್ಪಾದ/ತುರೀಯ ಗಾಯತ್ರೀ, ತುರೀಯಾತೀತ ಗಾಯತ್ರೀ, ಶತಾಕ್ಷರೀ ಗಾಯತ್ರೀ, ಅಜಪ/ಹಂಸ ಗಾಯತ್ರೀ, ಪ್ರಾಣಾಯಾಮ ಗಾಯತ್ರೀ. | |
| ▪ | **ಋಷಿ** | 109-112 |
| | ಮಂತ್ರ ದೃಷ್ಟಾರರು, ಮಂತ್ರ ನಿರ್ಮಾಣ, ಋಷಿ, ಗಾಯತ್ರೀ ಮಂತ್ರದ ದೃಷ್ಟಾ, ವಿಶ್ವಾಮಿತ್ರ ಪದದ ಅರ್ಥ, ಗಾಯತ್ರೀ ಮಂತ್ರ ಹಾಗೂ ವಿಶ್ವಾಮಿತ್ರರು, ಪುರಶ್ಚರಣ. | |
| ▪ | **ಸಂನ್ಯಾಸ** | 113-114 |
| | ಸಂನ್ಯಾಸಿಗಳು ಹಾಗೂ ಗಾಯತ್ರೀ ಮಂತ್ರ. | |

**ಗಾಯತ್ರೀದೇವಿ** 115-160

- **ದೇವಿ ಗಾಯತ್ರೀಯು ಬ್ರಹ್ಮದೇವನ ಪತ್ನಿಯೋ ಅಥವಾ ಪುತ್ರಿಯೋ?** 115-117
  ವಾಙ್ಮಯ ಸಾಹಿತ್ಯದಲ್ಲಿ ಸಮರ್ಥನೆ, ಚೈತನ್ಯ ಸೃಷ್ಟಿ, ಜಡ ಸೃಷ್ಟಿ, ವೇದ, ಪುತ್ರಿ, ಪತ್ನಿ.
- **ಜಗಜ್ಜನನೀ ಗಾಯತ್ರೀಯು ಸ್ತ್ರೀರೂಪದಲ್ಲಿರಲು ಕಾರಣ, ಪ್ರಚಲಿತ ಉದಾಹರಣೆಗಳು, ಗಾಯತ್ರೀ ಸ್ತ್ರೀ ವಾಚಕವಾಗಿರಲು ಸಮರ್ಥನೆ** 118-122
- **ಪರಾದೇವಿಯ ಶಾಸ್ತ್ರೀಯ ಪರಿಚಯ** 123-124
- **ತ್ರಿಕಾಲಗಳಲ್ಲಿ ಭಗವತೀ ಗಾಯತ್ರೀಯ ಸ್ವರೂಪವರ್ಣನೆ** 125-126
- **ಆದಿ ಪರಾಶಕ್ತಿಯ ಕೆಲವು ಸ್ವಾರಸ್ಯಕರ ವಿಷಯಗಳು** 127-133
- **ಮಹಾಮಾತೆ ಗಾಯತ್ರೀಯ ಶರೀರದಲ್ಲಿ ದೈವತ್ವದ ಸಾನಿಧ್ಯ** 134-135
  ದೇವತೆಗಳು, ಗುರುಗಳು, ಋಷಿಗಳು, ಗಣಗಳು, ಸೃಷ್ಟಿ, ಸಮಯ, ದೇವಿ ಗಾಯತ್ರೀ ಮಂತ್ರ.
- **24 ದೇವಿಯರು** 136-137
- **ಗಾಯತ್ರೀ ಶಕ್ತಿಕವಚದ ಮೂಲಕ ರಕ್ಷಣೆಗಾಗಿ ಪ್ರಾರ್ಥನೆ** 138-139
- **ಜಗನ್ಮಾತೆಯೊಂದಿಗಿರುವ ಹಂಸದ ಮಹತ್ವ** 140
- **ಜಗದಂಬೆಯ ದಶಕರಗಳು** 141-142
- **ಜಗಜ್ಜನನೀ ಗಾಯತ್ರೀ ಪಂಚಮುಖಿ ಏಕೆ?** 143-158
  ಸಂಧ್ಯಾವಂದನೆಯಲ್ಲಿ ಭಗವತೀಯ ದಿವ್ಯವರ್ಣನೆ, 18 ವಿಷಯಗಳ 180 ಪಂಚಕಗಳೊಂದಿಗೆ ಪಂಚಮುಖಿ ಗಾಯತ್ರೀಯ ಅಧ್ಯಯನ.
  ಮಂತ್ರ, ವೇದ, ಆತ್ಮ, ಸಾಧನೆ, ಸಂಧ್ಯಾವಂದನೆ, ಅಧ್ಯಯನ, ಜ್ಞಾನ, ಗುರು, ದೇವಿ, ಶರೀರ, ಭಕ್ತಿ/ಪೂಜೆ, ಶಂಕರ-ಶ್ರೀಹರಿ, ಅಗ್ನಿ/ಯಜ್ಞ ಸ್ವರೂಪ, ಅಸ್ತ್ರ, ಕುಂಡಲಿನೀ-ಚಕ್ರ, ವೃಕ್ಷ, ಅನ್ಯ ಪಂಚಕಗಳು, ವಿಘ್ನಗಳು.
- **ಗಾಯತ್ರೀ ತ್ರಿವೇಣಿ ಸಂಗಮ** 159-160

| ಭಾಗ - 5 | **ಅಧ್ಯಯನ** | **161-513** |
|---|---|---|

ಗಾಯತ್ರೀ ಮಂತ್ರದ ಅಧ್ಯಯನಕ್ಕೆ ಮುನ್ನುಡಿ 161-162

**ದೃಶ್ಯತೇ ಅನೇನ ಇತಿ ದರ್ಶನಮ್...** ಯಾವುದರ ಮೂಲಕ ನೋಡಲಾಗುತ್ತದೆಯೋ ಅದು **ದರ್ಶನ.**

**24 ಅಧ್ಯಾಯಗಳಲ್ಲಿ ಗಾಯತ್ರೀ ಮಂತ್ರದ ದರ್ಶನ**

- **ಅಧ್ಯಾಯ 1. ಗಾಯತ್ರೀ ಮಂತ್ರ ಹಾಗೂ ಸವಿತೃ** 163-170
  ಸವಿತೃ ಪದಕ್ಕೆ ವ್ಯಾಖ್ಯಾನಗಳು ಹಾಗೂ ವಿಶೇಷ ನಾಮಗಳು, ಸವಿತೃವಿನ ಗುಣ ಲಕ್ಷಣಗಳು, 27 ವಿಚಾರ ಬಿಂದುಗಳೊಂದಿಗೆ ಅಧ್ಯಯನ.
- **ಅಧ್ಯಾಯ 2. ಗಾಯತ್ರೀ ಮಂತ್ರ ಹಾಗೂ ಜ್ಞಾನ** 171-178
  ಜ್ಞಾನ ಪದಕ್ಕೆ ವ್ಯಾಖ್ಯಾನಗಳು, ಜ್ಞಾನಕ್ಕೆ ಸಂಬಂಧಿಸಿದ ಕೆಲವು ಮುಖ್ಯ ಪದಗಳು, ನಾನು-ನನ್ನ ಮೂಲ, 49 ವಿಚಾರ ಬಿಂದುಗಳೊಂದಿಗೆ ಅಧ್ಯಯನ.
- **ಅಧ್ಯಾಯ 3. ಗಾಯತ್ರೀ ಮಂತ್ರ ಹಾಗೂ ಬುದ್ಧಿ** 179-187
  ಬುದ್ಧಿ ಪದಕ್ಕೆ ವ್ಯಾಖ್ಯಾನಗಳು, ವಿಶ್ವಪ್ರಜ್ಞೆ, ಪ್ರಜಾಪತಿ, ಬ್ರಹ್ಮಾ ಗಾಯತ್ರೀ ಮಂತ್ರ, ಬುದ್ಧಿಯ 16 ವಿಧಗಳು, ಧೀಃ, ವಿವೇಕ, ನಿತ್ಯ ಹಾಗೂ ಸತ್ಯ, ಋತಂಭರಾ ಪ್ರಜ್ಞೆ, ಬುದ್ಧಿಯ ಗುಣಗಳು, 39 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

- **ಅಧ್ಯಾಯ 4. ಗಾಯತ್ರೀ ಮಂತ್ರ ಹಾಗೂ ಮನಸ್ಸು, ಇಂದ್ರಿಯ** **188-198**

  ಮನಸ್ಸು ಪದಕ್ಕೆ ವ್ಯಾಖ್ಯಾನಗಳು, ಮನಸ್ಸಿನ ಭಯಂಕರ ಆಕಾರ, ಮನಸ್ಸಿನ ಸ್ವರೂಪಗಳು, ಮನಸ್ಸಿನ ಶಕ್ತಿಗಳು, ಮನಸ್ಸಿಗೆ ಸಂಬಂಧಿಸಿದ ಕೆಲವು ಮುಖ್ಯ ಪದಗಳು, ಇಂದ್ರಿಯಗಳ ವಿಷಯ, ಮನಸ್ಸಿನ ದೋಷಗಳು, ಮನಸ್ಸಿನ ಅಸಾಧಾರಣ ಸಾಮರ್ಥ್ಯ, ಮನಸ್ಸು-ಆಹಾರ-ಮಂತ್ರ, ಮನಸ್ಸು ಹಾಗೂ ಸೋऽಹಂಭಾವ, ವಿದ್ವಾಂಸ ಭರ್ತೃಹರಿ ಹಾಗೂ ಆಚಾರ್ಯ ಶಂಕರರ ಅನುಸಾರ ದರಿದ್ರರಾರು? ಸಂತ ಶಿಶುನಾಳ ಶರೀಫರ ಸಾಹಿತ್ಯದಲ್ಲಿ ಮನಸ್ಸು, 62 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

- **ಅಧ್ಯಾಯ 5. ಗಾಯತ್ರೀ ಮಂತ್ರ ಹಾಗೂ ಆತ್ಮ, ಆಧ್ಯಾತ್ಮ** **199-210**

  ಆತ್ಮ ಪದಕ್ಕೆ ವ್ಯಾಖ್ಯಾನಗಳು, ವಿವಿಧ ಚಿಂತನೆಗಳು, ಆತ್ಮಕ್ಕೆ ಆಹಾರ, ಆತ್ಮಜ್ಞಾನದ ಮಹತ್ವ, ಆತ್ಮಕ್ಕೆ ಸಂಬಂಧಿಸಿದ ಕೆಲವು ಮುಖ್ಯ ಪದಗಳು.

  ಆಧ್ಯಾತ್ಮ ಪದಕ್ಕೆ ವ್ಯಾಖ್ಯಾನಗಳು, ಗಾಯತ್ರೀ ಮಂತ್ರದಲ್ಲಿರುವ ಪ್ರಾರ್ಥನೆಯ ಮರ್ಮ, ಋಷಿ ಜ್ಞಾನದ ಅನುಸಾರ ಜ್ಞಾನೋದಯ, 65 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

- **ಅಧ್ಯಾಯ 6. ಗಾಯತ್ರೀ ಮಂತ್ರ ಹಾಗೂ ಬ್ರಹ್ಮ, ಬ್ರಾಹ್ಮಣತ್ವ** **211-222**

  ಬ್ರಹ್ಮ ಪದಕ್ಕೆ ವ್ಯಾಖ್ಯಾನಗಳು, ಬ್ರಹ್ಮಕ್ಕೆ ಸಂಬಂಧಿಸಿದ ಕೆಲವು ಮುಖ್ಯ ಪದಗಳು, ಬ್ರಹ್ಮದಿಂದಲೇ ಮೋಕ್ಷ, ದ್ವೈತ-ಅದ್ವೈತಗಳಲ್ಲಿ ಮೋಕ್ಷ, ಮೋಕ್ಷಕ್ಕೆ ಪರ್ಯಾಯ ಪದಗಳು.

  ಬ್ರಾಹ್ಮಣ ಪದಕ್ಕೆ ವ್ಯಾಖ್ಯಾನಗಳು, ಬ್ರಾಹ್ಮಣ ... ಮತ್ತಷ್ಟು ಅಧ್ಯಯನ, ಗಾಯತ್ರೀ, ಬ್ರಾಹ್ಮಣ ಹಾಗೂ ಬ್ರಾಹ್ಮಣ್ಯ, 44 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

- **ಅಧ್ಯಾಯ 7. ಗಾಯತ್ರೀ ಮಂತ್ರ ಹಾಗೂ ಪ್ರಾಣ, ಪ್ರಾಣಾಯಾಮ** **223-246**

  ಪ್ರಾಣ ಪದಕ್ಕೆ ವ್ಯಾಖ್ಯಾನಗಳು, ಪ್ರಾಣಮಯಕೋಶ, ಪ್ರಣವ ಪದಕ್ಕೆ ವ್ಯಾಖ್ಯಾನಗಳು, ಪ್ರಾಣಗಳು-ಸ್ಥಾನ-ದ್ವಾರ ಹಾಗೂ ಕಾರ್ಯ, ಪಂಚಪ್ರಾಣಗಳು ಹಾಗೂ ಉಪಪ್ರಾಣಗಳು, ಪಂಚಮುಖಿ ಗಾಯತ್ರೀ ಉಪಾಸನೆ, ಪ್ರಾಣದ ಕಾರ್ಯ, ಪ್ರಾಣದ ವಿಷಯದಲ್ಲಿ ವಿಸ್ಮಯ ಸತ್ಯಗಳು, ಪ್ರಣವದ ವಿರಾಟ್ ಸ್ವರೂಪ, ಪ್ರಾಣ ಹಾಗೂ ಗಾಯತ್ರೀ, ಹಂಸ ಗಾಯತ್ರೀ ಜಪ, ಅಜಪ ಗಾಯತ್ರೀ ಮಂತ್ರ, 21,600 ಉಸಿರಾಟಗಳು ಹಾಗೂ ಜಪಗಳು, 25 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

  ಪ್ರಾಣಾಯಾಮ ಪದಕ್ಕೆ ವ್ಯಾಖ್ಯಾನಗಳು, ಪ್ರಾಣಾಯಾಮದ ವಿಧಗಳು, ಪ್ರಾಣಾಯಾಮದ ಮಹತ್ವ, ಪ್ರಾಣಾಯಾಮದ ಉದ್ದೇಶ, 10 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

  **ವಿಶೇಷವಾದ ವಿವರಣೆ**

  ಪ್ರಾಣಾಯಾಮದಲ್ಲಿ ಗಾಯತ್ರೀ ಮಂತ್ರ, ಪ್ರಾಣಾಯಾಮದ ಲಾಭಗಳು, ಪ್ರಾಣಾಯಾಮ ಮತ್ತು ಮೆದುಳು-ಮನಸ್ಸು, ಪ್ರಾಣಾಯಾಮದ ವಿಶೇಷತೆ, ಪ್ರಾಣಾಯಾಮದಿಂದ ಸಂಪೂರ್ಣ ಶರೀರಕ್ಕೆ ಆರೋಗ್ಯ.

- **ಅಧ್ಯಾಯ 8. ಗಾಯತ್ರೀ ಮಂತ್ರ ಹಾಗೂ ಶಕ್ತಿ** **247-255**

  ಶಕ್ತಿ ಪದಕ್ಕೆ ವ್ಯಾಖ್ಯಾನಗಳು, ಗಾಯತ್ರೀ ಮಂತ್ರದ ಶಕ್ತಿಗಳು, ಭಾವನ ಉಪನಿಷತ್ತು/ಶ್ರೀಚಕ್ರ ಉಪನಿಷತ್ತು ಅನುಸಾರ ಅಷ್ಟಶಕ್ತಿಗಳು, ಶಕ್ತಿಯ ವಿಷಯದಲ್ಲಿ ಮತ್ತಷ್ಟು ಚಿಂತನೆ, ಆಧ್ಯಾತ್ಮಿಕ ಶಕ್ತಿಗಳು, ಶಾಕ್ತ ಉಪನಿಷತ್ತು, ದೇವಿ ಉಪನಿಷತ್ತುವಿನಲ್ಲಿ ಭಗವತೀಯ ವರ್ಣನೆ, ಶಕ್ತಿಗೆ ಸಂಬಂಧಿಸಿದ ಕೆಲವು ಮುಖ್ಯ ಪದಗಳು, ಶಕ್ತಿ ಗಾಯತ್ರೀ ಮಂತ್ರ, 62 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

- **ಅಧ್ಯಾಯ 9. ಗಾಯತ್ರೀ ಮಂತ್ರ ಹಾಗೂ ತೇಜ, ತಪೋಬಲ** 256-266

  ತೇಜಸ್ಸು ಹಾಗೂ ತಪಸ್ಸು ಪದಗಳಿಗೆ ವ್ಯಾಖ್ಯಾನಗಳು, ಸತ್ಯ ಹಾಗೂ ಋತ, ತಪಸ್ಸಿನ ವಿಧಗಳು, ತಪಸ್ಸಿನ ಪ್ರಚಲಿತ ವಿಭಾಗಗಳು, ತಪಸ್ಸಿನ ಫಲ, ತಪಸ್ಸಿನ ವಿಷಯಕ್ಕೆ ಸಂಬಂಧಿಸಿದ ಕೆಲವು ಮುಖ್ಯ ಪದಗಳು, ತಪಸ್ವಿಯ ವ್ಯಾಖ್ಯಾನ, ತಪೋಬಲ ಮಹಿಮೆಯ ಅನೇಕ ಸಂಗತಿಗಳು, 30 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

- **ಅಧ್ಯಾಯ 10. ಗಾಯತ್ರೀ ಮಂತ್ರ ಹಾಗೂ ಮಹಾಮಹಿಮೆ** 267-278

  ತಾಪತ್ರಯಗಳು–ಪುರುಷಾರ್ಥಗಳು–ಗ್ರಂಥಿಗಳು–ಸಿದ್ಧಿಗಳು–ನಿಧಿಗಳು, ಗಾಯತ್ರೀ ಮಂತ್ರದ ಹಿರಿಮೆ–ಗರಿಮೆ, ಗಾಯತ್ರೀ ಕಲ್ಪವೃಕ್ಷ, ಗಾಯತ್ರೀಯ ಮಹತ್ವ, ವಿವಿಧ ಗಾಯತ್ರೀ ಮಂತ್ರಗಳು ಹಾಗೂ ಫಲಗಳು, 166 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

- **ಅಧ್ಯಾಯ 11. ಗಾಯತ್ರೀ ಮಂತ್ರ ಹಾಗೂ ಆರೋಗ್ಯ** 279-285

  ಶಾರೀರಿಕ, ಯೌಗಿಕ, ಮಾನಸಿಕ, ಬೌದ್ಧಿಕ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಆರೋಗ್ಯ.

  ಗಾಯತ್ರೀ ಮಂತ್ರವು ಆರೋಗ್ಯಕ್ಕೆ ಸಂಬಂಧಿಸಿದೆ, ಅಕ್ಷರ ಶಕ್ತಿಕವಚ, 56 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

- **ಅಧ್ಯಾಯ 12. ಗಾಯತ್ರೀ ಮಂತ್ರ ಹಾಗೂ ವೇದ** 286-296

  ವೇದ ಪದಕ್ಕೆ ವ್ಯಾಖ್ಯಾನಗಳು, ವೇದಗಳು ಮತ್ತು ಉಪವೇದಗಳು, ಗಾಯತ್ರೀಯು ವೇದಮಾತಾ, ಸಂಧ್ಯೆಯ ಪರಿಚಯ, ಸಂಧ್ಯಾ ಸಮಯ, ಗಾಯತ್ರೀ ಉಪಾಸನೆ, ವೇದಕ್ಕೆ ಸಂಬಂಧಿಸಿದ ಕೆಲವು ಮುಖ್ಯ ಪದಗಳು, 49 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

- **ಅಧ್ಯಾಯ 13. ಗಾಯತ್ರೀ ಮಂತ್ರ ಹಾಗೂ ವಿಜ್ಞಾನ** 297-305

  ವಿಜ್ಞಾನದ ಜ್ಞಾನ, ವ್ಯಾಹೃತಿ ಮತ್ತು ವಿಜ್ಞಾನ, ಮೂರು ಅವಸ್ಥೆಗಳು, ಡಿಎನ್‌ಎ ಹಾಗೂ ನವೀನ ಸೃಷ್ಟಿ, 37 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

  **ವಿಶೇಷವಾದ ವಿವರಣೆ**

  ಸೃಷ್ಟಿ ಹಾಗೂ ವಿಜ್ಞಾನ, ಶೂನ್ಯತ್ವ–ಪೂರ್ಣತ್ವ, ಜ್ಞಾನ–ವಿಜ್ಞಾನ ಹಾಗೂ ವೈದಿಕ ಜ್ಞಾನ ... ಅನಂತ ಶೂನ್ಯದ ಅನನ್ಯ ಅನುಭವ, ಅನಂತ ಶೂನ್ಯ.

- **ಅಧ್ಯಾಯ 14. ಗಾಯತ್ರೀ ಮಂತ್ರ ಹಾಗೂ ಜಪ** 306-320

  ಗಾಯತ್ರೀ ಮಂತ್ರವನ್ನು ಯಾರು ಜಪಿಸಬೇಕು, ಗಾಯತ್ರೀ ಮಂತ್ರವನ್ನು ಯಾವ ರೀತಿಯಲ್ಲಿ ಜಪಿಸಬೇಕು, ಗಾಯತ್ರೀ ಮಂತ್ರವನ್ನು ಎಷ್ಟು ಜಪಿಸಬೇಕು, ಜಪದ ಉದ್ದೇಶ, ಜಪದ ವಿಷಯದಲ್ಲಿ ಕೆಲವು ಸಂಗತಿಗಳು, ಜಪದ ಇನ್ನಷ್ಟು ಮಹತ್ವಗಳು, ಜಪದ ಪ್ರಾಮುಖ್ಯತೆ, ಜಪದ ವಿಧಗಳು, 28 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

  **ವಿಶೇಷವಾದ ವಿವರಣೆ**

  ಜಪಮಾಲೆಯಲ್ಲಿ 108 ಸಂಖ್ಯೆಯ ರೋಚಕ ಘನತೆ –

  ಆಧ್ಯಾತ್ಮ, ವಾಙ್ಮಯ ಸಾಹಿತ್ಯ, ಪುರಾಣ, ಖಭೌತ ವಿಜ್ಞಾನ, ದೈವಿಕತೆ, ಧಾರ್ಮಿಕ ಆಚರಣೆ, ಮನುಷ್ಯ, ಯೌಗಿಕ, ಕುಂಡಲಿನೀ ಯೋಗ, ಜ್ಯೋತಿಷ್ಯ, ಗಣಿತ ಹಾಗೂ ಸಂಖ್ಯಾಶಾಸ್ತ್ರ, ಪ್ರಾಗೈತಿಹಾಸ, ವಿಜ್ಞಾನ, ಆರೋಗ್ಯ, ಹಬ್ಬ–ಹರಿದಿನ ಹಾಗೂ ಆಟ.

- **ಅಧ್ಯಾಯ 15. ಗಾಯತ್ರೀ ಮಂತ್ರ ಹಾಗೂ ವಾಮಮಾರ್ಗ ಸಾಧನೆ** 321-328

  ವಾಮಮಾರ್ಗ ಸಾಧನೆಯ ಅರ್ಥ, ಸಂಕಲ್ಪಮಯಿ ಗಾಯತ್ರೀ ಹಾಗೂ ಪರಮಾಣುಮಯಿ ಸಾವಿತ್ರೀ ಸಾಧನೆ, ತಂತ್ರ ಸಾಧನೆ, 45 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

▪ **ಅಧ್ಯಾಯ 16. ಗಾಯತ್ರೀ ಮಂತ್ರ ಹಾಗೂ ಕರ್ಮ, ಪಾಪ, ದೋಷ** **329-335**
ಕರ್ಮ-ಪಾಪ-ದೋಷ ಪದಗಳಿಗೆ ವ್ಯಾಖ್ಯಾನಗಳು, ಗಾಯತ್ರೀ ಮಂತ್ರದಿಂದ ಪಾಪಗಳ ನಷ್ಟ, 24 ಮೂಲ ತತ್ತ್ವಗಳು, ಶ್ರೀಪಾದ ಶ್ರೀವಲ್ಲಭರ ದಿವ್ಯಚರಿತಾಮೃತದಲ್ಲಿ ಪಾಪಕರ್ಮಗಳ ಉಲ್ಲೇಖ, 53 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

▪ **ಅಧ್ಯಾಯ 17. ಗಾಯತ್ರೀ ಮಂತ್ರ ಹಾಗೂ ಶ್ರೇಷ್ಠತೆ** **336-348**
ಗಾಯತ್ರೀ ಮಂತ್ರದ ಶ್ರೇಷ್ಠತೆ, ಗಾಯತ್ರೀ ಮಂತ್ರದ ಉದ್ದೇಶ, ಗಾಯತ್ರೀ ಅನುಪಮ ಮಂತ್ರ, ಗಾಯತ್ರೀ ಮಂತ್ರದ ಪ್ರಾಧಾನ್ಯತೆ, ವಿಶ್ವಾಮಿತ್ರ ಗಾಯತ್ರೀ ಮಂತ್ರದ ಪಾದಗಳು, 164 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

▪ **ಅಧ್ಯಾಯ 18. ಗಾಯತ್ರೀ ಮಂತ್ರ ಹಾಗೂ ವ್ಯಕ್ತಿತ್ವ ವಿಕಸನ** **349-355**
ಗಾಯತ್ರೀ ಮಂತ್ರದಿಂದ ವ್ಯಕ್ತಿತ್ವದಲ್ಲಿ ಸಕಾರಾತ್ಮಕ ಬದಲಾವಣೆ, ಗಾಯತ್ರೀ ಅಗಣಿತ ಕೃಪೆ, ಗಾಯತ್ರೀ ಮಂತ್ರದ ಮೂಲಕ ವ್ಯಷ್ಟಿ ಮತ್ತು ಸಮಷ್ಟಿಯ ಏಳ್ಗೆ, 67 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

▪ **ಅಧ್ಯಾಯ 19. ಗಾಯತ್ರೀ ಮಂತ್ರ ಹಾಗೂ ಅಸದೃಶ ಅಭಿಧಾನಗಳು** **356-360**
ವಿಲಕ್ಷಣ ನಾಮಧೇಯಗಳು, ಗಾಯತ್ರೀ ಮಂತ್ರದ ವಿಶಿಷ್ಟತೆ, 66 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

▪ **ಅಧ್ಯಾಯ 20. ಗಾಯತ್ರೀ ಮಂತ್ರ ಹಾಗೂ 24 ಅಕ್ಷರಗಳು** **361-370**
24 ತತ್ತ್ವಗಳು, ತಂತ್ರ ಗ್ರಂಥದಲ್ಲಿ 24 ದೇವತೆಗಳು, 24 ಋಷಿಗಳು ಹಾಗೂ 24 ವಿಷ್ಣುವಿನ ಅವತಾರಗಳು, 24 ಅಕ್ಷರಗಳ ವಿಶ್ಲೇಷಣೆ, ಗಾಯತ್ರೀ ತತ್ತ್ವಬೋಧಃ, 40 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

**ವಿಶೇಷವಾದ ವಿವರಣೆ**

ನಾದಯೋಗ ಸಾಧನೆ, ಅನಾಹತ ದರ್ಶನ, ಸಜೀವ ಸಮಾಧಿ, ಅನಾಹತ ಶಬ್ದಗಳು, ಹೃದಯ ಪದ್ಮ ಹಾಗೂ ಕಲ್ಪವೃಕ್ಷ.

▪ **ಅಧ್ಯಾಯ 21. ಗಾಯತ್ರೀ ಮಂತ್ರ ಹಾಗೂ ಸ್ತ್ರೀಯರ ಸಾಧನೆ** **371-389**
ಮಹಿಳೆಯರು ಗಾಯತ್ರೀ ಮಂತ್ರವನ್ನು ಜಪಿಸಬಹುದೇ?, ನಾರಿ ಹಾಗೂ ವೇದಾಧ್ಯಯನ, ವೇದವಿದ್ಯೆಯನ್ನರಿತ ವನಿತೆಯರು, ವಿಶಿಷ್ಟ ಗೌರವಗಳು, ವೈದಿಕಕಾಲದ ಮಹಿಳೆಯರಲ್ಲಿ ಎರಡು ವಿಭಾಗಗಳು, ಗಾಯತ್ರೀ ಮಂತ್ರದ ಜಪ - ನಾರಿಯರೂ ಸಹ ಮಾಡಲೇಬೇಕಾದ ಸಾಧನೆ, ಸಂಸ್ಕಾರಗಳು, ಪುರುಷರ ಜೀವನದಲ್ಲಿ ಸ್ತ್ರೀಯರ ಮಹತ್ವ, ಈ ವಿಷಯ ಕುರಿತು ಸಮಾಜದಲ್ಲಿ ಗೊಂದಲವೇಕೆ ... ಕಾರಣಗಳು, ಮಾತೆಯ ಕರ್ತವ್ಯ, ಆಧ್ಯಾತ್ಮಿಕ ರಂಗದಲ್ಲಿ ಐತಿಹಾಸಿಕ ನಿರ್ಣಯ, ಪ್ರಸ್ತುತ ಸಮಯದಲ್ಲಿ ಸ್ತ್ರೀ ಹಾಗೂ ವೈದಿಕ ಕಾರ್ಯಗಳು, ಪರಮ ಆದರಣೀಯ ಮಾತೆಯರು, ಭಾರತದಲ್ಲಿ ಕಲಿಯುಗದ ಅಭಿನವ ವಿಶ್ವಾಮಿತ್ರರ ಜನನ.

▪ **ಅಧ್ಯಾಯ 22. ಗಾಯತ್ರೀ ಮಂತ್ರ ಹಾಗೂ ಕುಂಡಲಿನೀ ಶಕ್ತಿ, ಚಕ್ರಗಳು** **390-438**
ಕುಂಡಲಿನೀ ಅಧ್ಯಯನ, ಚಕ್ರಗಳು, ಕುಂಡಲಿನೀ-ಚಕ್ರಗಳು-ನಾಡಿಗಳು ಹಾಗೂ ಕಿರಣಗಳು, ಯೋಗ ವಿಜ್ಞಾನದಲ್ಲಿ ಸಪ್ತಚಕ್ರಗಳ ಸವಿಸ್ತಾರ ಚಿಂತನ, ಅಖಂಡ ಭಾರತದ ಯೌಗಿಕ ಶರೀರ, ಚಕ್ರಗಳ ವಿಶೇಷತೆ, ಚಕ್ರಗಳು ಹಾಗೂ ಆರೋಗ್ಯ, ಚಕ್ರ ಭೇದನೆ, ಉಲ್ಲೇಖ ಗ್ರಂಥಗಳು, 26 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

**ವಿಶೇಷವಾದ ವಿವರಣೆ**

ಲೋಕಗಳು, ಸವಿಕಲ್ಪ ಹಾಗೂ ನಿರ್ವಿಕಲ್ಪ, ಅನುಭಾವಿ, ದೈವಿಕ ವಾಣಿಗಳು ಹಾಗೂ ವಾಣಿ ವಿಜ್ಞಾನ, ವಿವಿಧ ಯೋಗಮಾರ್ಗಗಳೊಂದಿಗೆ ವಾಣಿಗಳ ಸಂಬಂಧ, ಯೋಗ ಹಾಗೂ ಯೋಗ ಮಾರ್ಗಗಳು, ಕುಂಡಲಿನೀ ಯೋಗ, ಪರಾಶಕ್ತಿಯ ಆರೋಹಣ ಹಾಗೂ ಅವರೋಹಣ, ಕುಂಡಲಿನೀ ಶಕ್ತಿಯ ಕಾರ್ಯ, ಗ್ರಂಥಿಗಳು, ಮರ್ಮಸ್ಥಾನ, ನಾಡಿಗಳು, ಕುಂಡಲಿನೀ ಸಾಧನೆ, ಕುಂಡಲಿನೀ ಶಕ್ತಿಯ ಜಾಗರಣೆ, ಕುಂಡಲಿನೀ ಶಕ್ತಿಯ ಊರ್ಧ್ವಗಾಮಿತ್ವ, ಭಗವಾನ್ ವಿಶ್ವಾಮಿತ್ರರ ದೃಷ್ಟಿಯಲ್ಲಿ ಕುಂಡಲಿನೀ ಉತ್ಥಾನ, ಕುಂಡಲಿನೀ ಶಕ್ತಿಯ ಉತ್ಕರ್ಷದೊಂದಿಗೆ ಬದಲಾವಣೆಗಳು, ಎಚ್ಚರಗೊಂಡಂತಹ ಕುಂಡಲಿನೀ ಶಕ್ತಿ ಹಾಗೂ ವಿಜ್ಞಾನ, ಫಲಗಳು.

- **ಅಧ್ಯಾಯ 23. ಗಾಯತ್ರೀ ಮಂತ್ರ ಹಾಗೂ ಬ್ರಾಹ್ಮೀಮುಹೂರ್ತ, ಮಾನಸಪೂಜೆ** **439-461**

ಬ್ರಾಹ್ಮೀ ಹಾಗೂ ಮುಹೂರ್ತ ಪದಗಳಿಗೆ ವ್ಯಾಖ್ಯಾನಗಳು, ದಿನದ ವಿವರಣೆ, ಪ್ರಹರ ಹಾಗೂ ವೇಳೆಯ ವಿವರ, ಪ್ರಾಚೀನ ಕಾಲಗಣನೆಯೊಂದಿಗೆ ಪ್ರಸ್ತುತ ಸಮಯದ ಪರಿಚಯ, ಮುಹೂರ್ತಗಳು, ಉಷೋದಯ-ಅರುಣೋದಯ-ಪ್ರಾತಃಕಾಲ-ಸೂರ್ಯೋದಯ, ಬ್ರಾಹ್ಮೀಮುಹೂರ್ತದ ಪ್ರಾಮುಖ್ಯತೆ, ಬ್ರಹ್ಮಮುಹೂರ್ತಕ್ಕೆ ವಿವಿಧ ವ್ಯಾಖ್ಯಾನಗಳು, ಶ್ಲೋಕ ಹಾಗೂ ಸ್ತೋತ್ರಗಳಲ್ಲಿ ಪ್ರಾತಃಕಾಲದ ಉಲ್ಲೇಖ, 11 ವಿಚಾರ ಬಿಂದುಗಳೊಂದಿಗೆ ಅಧ್ಯಯನ.

**ವಿಶೇಷವಾದ ವಿವರಣೆ**

ವಿವಿಧ ಆಯಾಮಗಳಲ್ಲಿ ಬ್ರಾಹ್ಮೀಮುಹೂರ್ತದ ಮಹತ್ವ - ಆಧ್ಯಾತ್ಮ, ದೈವಿಕತೆ, ವಿಜ್ಞಾನ, ಜನಜೀವನ, ನಿಸರ್ಗ.

ಮಾನಸಪೂಜೆಯ ಮಹತ್ವ, ವೈಜ್ಞಾನಿಕ ಅರ್ಥದಲ್ಲಿ ಮಾನಸಪೂಜೆ, ಗಾಯತ್ರೀ ಮಂತ್ರ ಹಾಗೂ ಮಾನಸಪೂಜೆ, ಪೂಜಾ ವಿಧಾನ ಹಾಗೂ ಫಲ, ಆದಿಗುರು ಶ್ರೀ ಶ್ರೀ ಶಂಕರಾಚಾರ್ಯರ ಮಾರ್ಗದರ್ಶನದಲ್ಲಿ ಮಾನಸಪೂಜೆ.

- **ಅಧ್ಯಾಯ 24. ಗಾಯತ್ರೀ ಮಂತ್ರ ಹಾಗೂ ಗಾಯತ್ರರು** **462-513**

ಗಾಯತ್ರರು ಪದದ ಅರ್ಥ, ಗಾಯತ್ರೀ ಮಂತ್ರದಲ್ಲಿರುವ ಪ್ರಾರ್ಥನೆ ಹಾಗೂ ಸಂದೇಶ, ಗಾಯತ್ರೀ ಘನತೆ.

166 ಗಾಯತ್ರರೊಂದಿಗೆ ಸತ್ಸಂಗ …

ದೇವತೆಗಳು, ಋಷಿಗಳು, ಸಂತ-ಮಹಾತ್ಮರು, ಮಹನೀಯರು, ಸಾಧಕರು-ವಿದ್ವಾನರು-ಖ್ಯಾತ ಬರಹಗಾರರು, ಗುರು ಭಕ್ತರು, ಚಲನಚಿತ್ರ ಕಲಾವಿದರು, ವಿದೇಶಿ ಸಾಧಕರು.

**ಆಧಾರ ಗ್ರಂಥಗಳು** **514-521**

- **ಗಾಯತ್ರೀ ಜ್ಞಾನದ ಉಲ್ಲೇಖಗಳು** **514-515**
- **ಗಾಯತ್ರೀ ಮಂತ್ರದ ಆಕರಗಳು** **516**
- **ಗ್ರಂಥಗಳ ಋಣ** **517-521**

**ಮತ್ತೊಂದು ನುಡಿ** **522**





## ಸಂಗ್ರಹ ಕರ್ತೃ: ಸೌ. ಅನಿತಾ ಅರವಿಂದ ಸರಾಫ

ಲೇಖಕಿಯ ಧಾರ್ಮಿಕ ಪ್ರಯಾಣವು ಅವರ ತಂದೆ ತಾಯಿಯ ಆಶೀರ್ವಾದದ ಮೂಲಕ ಶ್ರೀದತ್ತ ಭಕ್ತಿಯಿಂದ ಪ್ರಾರಂಭವಾಯಿತು.

ಅನಂತರದಲ್ಲಿ ಅವರ ಆಧ್ಯಾತ್ಮಿಕ ಯಾತ್ರೆಯು ಭಗವತೀ ಗಾಯತ್ರೀಯ ಅಪಾರ ಕರುಣೆಯಿಂದ ಗಾಯತ್ರೀಯತ್ತ ಪಲ್ಲಟಗೊಂಡಿತು.

ಗಾಯತ್ರೀ ತಪೋಭೂಮಿ, ತಡಸ ಗ್ರಾಮ, ಕರ್ನಾಟಕ, ಇದರ ಸ್ಥಾಪನಾಚಾರ್ಯರಾದ ಪರಮಪೂಜನೀಯ ಸದ್ಗುರು ಶ್ರೀ ಶ್ರೀ ವಲ್ಲಭ ಚೈತನ್ಯ ಮಹಾರಾಜರಿಂದ ದೀಕ್ಷೆಹೊಂದಿದ ನಂತರ ಲೇಖಕಿಯ ಗಾಯತ್ರೀ ಸಾಧನೆಯು ನಿರಂತರ ಸಾಗುತ್ತಿರುವುದು.

## ಪುಸ್ತಕ: ಗಾಯತ್ರೀ ಚೈತನ್ಯ

ಲೇಖಕಿಯು ತಮ್ಮ ಸದ್ಗುರುಗಳ ಆಶೀರ್ವಾದ ಹಾಗೂ ಆದೇಶದಂತೆ ವೈದಿಕ, ಔಪನಿಷದಿಕ, ಪೌರಾಣಿಕ, ಐತಿಹಾಸಿಕ, ಹಾಗೂ ಸಾಂದರ್ಭಿಕವಾಗಿ ಗಾಯತ್ರೀ ಮಂತ್ರದ ಮಹತ್ವವನ್ನು ತಿಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿರುವರು.

E-ISBN:978-93-6252-185-9

9 789362 525451

MRP Rs. 800/-

Selfypage Developers Pvt Ltd